ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 30 | ಜುಲೈ 26, 1981 | ಬೆಲೆ : 60 ಪೈಸೆ

ಇನ್ನೂ ಬುದ್ಧಿ ಬಂದಿಲ್ಲ

ಸಂಪಾದಕೀಯ

ಕರ್ನಾಟಕ ರಾಜ್ಯದ ರಾಜಕೀಯ ಪರಿಸ್ಥಿತಿಯು ಮತ್ತು ಇಲ್ಲಿನ ಬೆಳವಣಿಗೆಗಳು ರಾಷ್ಟ್ರದಾದ್ಯಂತ ಗಮನ ಸೆಳೆದಿವೆ. ಅಧಿಕಾರಕ್ಕೆ ಬಂದು ದಿನಿಂದ ಗುಂಡೂರಾವ್ ಸರಕಾರವು ಅನುಸರಿಸಿದ ಜನವಿರೋಧಿ ಮತ್ತು ಪ್ರಜಾಪ್ರಭುತ್ವವಿರೋಧಿ ಧೋರಣೆಗಳು ಹಾಗೂ ರಾವ್ ಸರಕಾರದ ದುರಾಡಳಿತವು ಜನತೆಯಲ್ಲಿ ಅತೃಪ್ತಿ ಮೂಡಿಸಿದ್ದು, ವಿರೋಧ ಪಕ್ಷಗಳಿಗೆ ಉತ್ತಮ ಅವಕಾಶ ದೊರೆಯುತ್ತಾ ಬಂದಿದೆ. ಆದರೆ ಈ ಅವಕಾಶಗಳನ್ನು ಮತ್ತು ಜನತೆಯಲ್ಲಿ ಉಂಟಾಗಿರುವ ಅತೃಪ್ತಿಯನ್ನು ಉಪಯೋಗಿಸಿಕೊಳ್ಳುವುದರಲ್ಲಿ ವಿರೋಧ ಪಕ್ಷಗಳು ಯಶಸ್ವಿಯಾಗಿಲ್ಲ ಮತ್ತು ಸದ್ಯದ ಪರಿಸ್ಥಿತಿಯನ್ನು ನೋಡಿದರೆ ಯಶಸ್ವಿಯಾಗುವಂತೆಯೂ ತೋರುವುದಿಲ್ಲ.

ಇಬ್ರಾಹಿಂ ಪ್ರಕರಣವು ಎಲ್ಲಾ ವಿರೋಧ ಪಕ್ಷಗಳನ್ನೂ ಒಟ್ಟಾಗಿ ಕಾರ್ಯಾಚರಣೆಗೆ ಇಳಿಸಿತ್ತು. ಗುಂಡೂರಾವ್ ಸರಕಾರದ ದುರಾಡಳಿತದಿಂದ ಸಿಟ್ಟಿಗೆದ್ದಿರುವ ಜನತೆಯ ಬೆಂಬಲವೂ ನಿರೀಕ್ಷೆಗೆ ಮೀರಿ ದೊರೆಯಿತು. ರಾಜ್ಯದ ಹೆಚ್ಚಿನ ಜಿಲ್ಲಾಕೇಂದ್ರ ಮತ್ತು ತಾಲ್ಲೂಕುಕೇಂದ್ರಗಳಲ್ಲಿ ಯಶಸ್ವಿ ಬಂದ್ ಕಾರ್ಯಾಚರಣೆ ನಡೆಯಿತು. ರಾಜ್ಯದಲ್ಲಿ ಪ್ರಾರಂಭಗೊಂಡ ಚಳುವಳಿಯ ಬಿಸಿ ದೆಲ್ಲಿಯನ್ನೂ ತಲುಪಿತು. ಬಹುಶಃ ದೇಶದ ಚರಿತ್ರೆಯಲ್ಲೇ ಭಯಂಕರವಾದ ಕಳ್ಳಭಟ್ಟಿ ದುರಂತವು ಸರಕಾರದ ಅದಕ್ಷತೆಯ ಪರಮಾವಧಿಯನ್ನು ಎತ್ತಿತೋರಿಸಿತು. ಇಷ್ಟೆಲ್ಲಾ ಆಗುವಾಗ ಮತ್ತೆ ವಿರೋಧ ಪಕ್ಷಗಳು ಒಂದೊಂದು ಒಂದೊಂದು ಕಡೆ ಮುಖ ತಿರುಗಿಸುವುದು ಪ್ರಾರಂಭವಾಗಿದೆ. ಗುಂಡೂರಾವ್ ಅವರು ಮೀಸೆ ತಿರುವಿ, ಸಂತಸದಿಂದ ಹಿಗ್ಗುವಂತಾಗಿದೆ. ರಾಜ್ಯದ ವಿರೋಧ ಪಕ್ಷಗಳಿಗೆ ಇನ್ನೂ ಬುದ್ಧಿ ಬಂದಿಲ್ಲವೆಂದು ಜನರೇ ಮಾತಾಡುವಂತಾಗಿದೆ.

ಕಾಂಗೈ ದುರಾಡಳಿತದ ವಿರುದ್ಧ, ಪ್ರಜಾಪ್ರಭುತ್ವ ಮೌಲ್ಯಗಳ ರಕ್ಷಣೆಗಾಗಿ ವಿಶಾಲತಳಹದಿಯ ಒಗ್ಗಟ್ಟಿನಿಂದ ಎಲ್ಲಾ ವಿರೋಧ ಶಕ್ತಿಗಳೂ ಒಂದಾಗಿ ಹೋರಾಟ ನಡೆಸುವುದು ಅವಶ್ಯ ಮತ್ತು ಸ್ವಾಗತಾರ್ಹ. ಈಗಲೂ ಕಾಲ ಮಿಂಚಿ ಹೋಗಿಲ್ಲ; ಎಲ್ಲಾ ವಿರೋಧ ಪಕ್ಷಗಳೂ ಏಕಕಂಠದಿಂದ ರಾವ್ ಸರಕಾರವನ್ನು ಕೆಳಗಿಳಿಯುವಂತೆ ಹೇಳಬೇಕು. ಜನತೆಯನ್ನು ಒಗ್ಗೂಡಿಸಿ ಚಳುವಳಿಯನ್ನು ತೀವ್ರಗೊಳಿಸಬೇಕು. ವಿರೋಧ ಪಕ್ಷಗಳನ್ನು, ಪ್ರಜಾಪ್ರಭುತ್ವ ಮೌಲ್ಯಗಳನ್ನು ಅವಹೇಳನ ಮಾಡುತ್ತಿರುವ ಗುಂಡೂರಾವ್ ಸರಕಾರಕ್ಕೆ ಸವಾಲನ್ನು ಒಡ್ಡಲೇಬೇಕು.

ಆದರೆ ಇದರೊಂದಿಗೆ ರಾಜ್ಯದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸುವ ಪ್ರಯತ್ನವು ನಡೆದರೇನೇ ಜನತೆಗೆ ಒಂದು ದಾರಿ ತೋರಿಸುವುದು ಸಾಧ್ಯ. ಕಾಂಗೈಗೆ ಬದಲು ಒಂದು ಪರ್ಯಾಯವನ್ನು ಕಟ್ಟುವತ್ತ ಮುನ್ನಡೆಯುವುದು ಸಾಧ್ಯ. ಈ ದಿಸೆಯಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು ಗಂಭೀರವಾಗಿ ಯೋಚಿಸಿ, ಮುನ್ನಡೆಯದಿದ್ದಲ್ಲಿ ಜನತೆಯ ಸಮಸ್ಯೆಗಳಿಗೆ ಪರಿಹಾರ ಅಸಾಧ್ಯ. ●

ಜನವಿರೋಧಿ ಧೋರಣೆಗಳ ವಿರುದ್ಧ

“ಪೊಲಿಟ್‌ಬ್ಯೂರೋ ಎಚ್ಚರಿಕೆ”

ಇಂದಿರಾಗಾಂಧಿ ಸರಕಾರವು ಕಡ್ಡಾಯ ಠೇವಣಾತಿ ಕ್ರಮವನ್ನು ಕಾರ್ಮಿಕರು ಮತ್ತು ಸಂಬಳವನ್ನು ಪಡೆದು ಕೆಲಸ ಮಾಡುವ ಇತರೆ ನೌಕರವರ್ಗದ ಮೇಲೆ ಬಲಾತ್ಕಾರವಾಗಿ ಹೇರುವತ್ತ ಮುನ್ನಡೆಯುತ್ತಿದೆ ಎಂಬುದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಎಚ್ಚರಿಸಿದೆ. ಮೇಲುವರ್ಗದ ವಿಭಾಗದವರೊಂದಿಗೆ ಸರಕಾರವು ಕಠಿಣವಾಗಿ ವರ್ತಿಸುತ್ತಿದೆ ಎಂಬಂತೆ ತೋರಿಸುವುದಕ್ಕಾಗಿ ಜುಲೈ 11ರಂದು ಎರಡು ಸುಗ್ರೀವಾಜ್ಞೆಗಳನ್ನು ಮಾಡಲಾಗಿದೆ. ಕಾರ್ಮಿಕವರ್ಗ ಮತ್ತು ಆರ್ಥಿಕವಾಗಿ ಕೆಳವರ್ಗದ ಮೇಲೆ ಆಕ್ರಮಣ ನಡೆಸಲು ಸರಕಾರವು ಧರಿಸಿಕೊಂಡ ಮುಖವಾಡವು ಇದಾಗಿದೆ.

ಪೆಟ್ರೋಲಿಯಂ ಸಾಮಗ್ರಿಗಳ ಬೆಲೆ ಏರಿಕೆಯಿಂದಾಗಿ, ಇತರೆಲ್ಲಾ ರಂಗಗಳಲ್ಲೂ ತೀವ್ರ ಪರಿಣಾಮವಾಗಲಿದ್ದು, ಜನತೆಯ ಮೇಲೆ ಒಂದುಸಹಸ್ರ ಕೋಟಿ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಹೊರೆ ಹೇರಲಾಗುವುದೆಂದು ಅಂದಾಜು ಮಾಡಲಾಗಿದೆ. ಇದರಿಂದ ಹಣದುಬ್ಬರವು ಇನ್ನೂ ಹೆಚ್ಚುವುದು ಮಾತ್ರವಲ್ಲ ಜನತೆಯು ಇದಕ್ಕೆ ಬಲಿಯಾಗುವುದು ಸಹಜ. ಹಣದುಬ್ಬರ ಮತ್ತು ಬೆಲೆಏರಿಕೆಗಳ ಬೆಳವಣಿಗೆಯ ಗತಿಯನ್ನು ನಿಧಾನವಾಗುವಂತೆ

[ಕಡೇ ಪುಟ ನೋಡಿ]

ಹುತಾತ್ಮರಿಗೆ ಕೆಂಪು ವಂದನೆಗಳು

ಜುಲೈ 21, 1980 ರಾಜ್ಯದ ಇತಿಹಾಸದಲ್ಲಿ ಮರೆಯಲಾಗದ ದಿನ. ರಾಜ್ಯದ ರೈತಸಮುದಾಯ ಸಿಡಿದೆದ್ದ ದಿನ. ಅಂದು, ಸಂಚಿತವಾಗಿ ಹೊಗೆಯಾಡುತ್ತಿದ್ದ ರೈತರ ಆಕ್ರೋಷ ನರಗುಂದ-ನವಲಗುಂದದಲ್ಲಿ ಸ್ಫೋಟವಾಯಿತು. ಕಾಂಗೈ ಸರಕಾರದ ರಕ್ತಪಿಪಾಸೆಗೆ ಕೆಲವು ಧೀರರು ಬಲಿಯಾದರು.

ಆ ಧೀರರು ಹುತಾತ್ಮರಾಗಿ ಒಂದು ವರ್ಷ ಕಳೆಯಿತು. ಮಹಾನ್ ಉದ್ದೇಶಕ್ಕಾಗಿ ರಕ್ತತರ್ಪಣ ನೀಡಿದ ನರಗುಂದ-ನವಲಗುಂದ ರೈತ ಚಳುವಳಿಯ ಹುತಾತ್ಮರಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತನ್ನ ಕೆಂಪುವಂದನೆಗಳನ್ನು ಸಲ್ಲಿಸುತ್ತದೆ.

ಒಳಜಗಳದಿಂದ ಹೊಲಸು ನಾರುತ್ತಿರುವ

ಚವ್ಹಾಣರ ತವರು ಮನೆ

“ಇದು ಪಕ್ಷಾಂತರವಲ್ಲ; ಮರಳಿ ಮನೆಗೆ” ಎಂದು ಕಾಂಗ್ರೂಗೆ ರಾಜೀನಾಮೆ ನೀಡಿ ಸಮರ್ಥಿಸಿಕೊಂಡು ಕೆಲವು ದಿನಗಳ ನಂತರ ನನ್ನ ಭವಿಷ್ಯ ಇಂದಿರಾರ ಕೈಯಲ್ಲಿದೆ! ಎಂದು ಹೇಳಿಕೆ ನೀಡಿದರು. ಇದು ಕಾಂಗ್ರೂಗೆ ರಾಜೀನಾಮೆ ನೀಡಿ ಕಾಂಗೈಗೆ ಪ್ರವೇಶ ಬಯಸಿರುವ ನಾಯಕರ ದಯನೀಯ ಸ್ಥಿತಿ.

ತಾವು ಮರಳುವಲ್ಲಿ ಯಾವುದೇ ತೊಂದರೆ ಉಂಟಾಗಲಾರದೆಂದು ಕಲ್ಪಿಸಿದ ಚವ್ಹಾಣ ಸಾಹೇಬರು ಈ ಕುರಿತು ಸಾಕಷ್ಟು ಜೋರಾಗಿ ಪ್ರಚಾರ ಮಾಡಿಕೊಂಡಿದ್ದರು.

ಚವ್ಹಾಣರು ಕಾಂಗ್ರೂಗೆ ರಾಜೀನಾಮೆ ನೀಡಿದ ನಂತರ ಕಾಂಗೈ ಸೇರಲು ಅರ್ಜಿಯನ್ನು ಹಾಕಿದರು. ಆದರೆ ಇನ್ನೂವರೆಗೂ ಆ ಮಹಾಶಯ ತ್ರಿಶಂಕುಸ್ವರ್ಗದಲ್ಲಿದ್ದಾರೆ. ಅಲ್ಲದೇ ಮಾತಾಜಿಯವರು ಇತ್ತೀಚೆಗೆ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡುತ್ತಾ “ಚವ್ಹಾಣ್ ಮತ್ತಿತರರು ಕಾಂಗೈ ಪ್ರವೇಶ ಬಯಸಿದ್ದು ನಮಗಿಂತ ಅವರಿಗೆ ಲಾಭದಾಯಕ” ಎಂದಿರುವುದಂತೂ ಗಾಯದ ಮೇಲೆ ಬರೆಎಳೆದಂತಾಗಿದೆ.

ಈ ಸ್ಥಿತಿ ಕೇವಲ ಚವ್ಹಾಣರಿಗೆ ಮಾತ್ರ ಸೀಮಿತವಲ್ಲ. ಅವರಂತಹ ಇತರ ಕೆಲವರ ಪಾಡೂ ಇದೇ ಆಗಿದೆ. ಜೂನ್ 23ರ ಹಿಂದುಸ್ತಾನ್ ಟೈಮ್ಸ್ ಮುಂಬೈ ವರದಿಗಾರ ಈ ರೀತಿ ಬರೆದಿದ್ದಾರೆ: “1977ರ ಭಾರೀ ಸೋಲಿನ ದಿನಗಳಲ್ಲೂ ಮಹಾರಾಷ್ಟ್ರದ ಕಾಂಗ್ರೆಸ್ಸಿಗರಲ್ಲಿ ಈ ರೀತಿ ಗೊಂದಲವಿರಲಿಲ್ಲ. ಈ ವರದಿಗಾರ ಮುಂದುವರೆದು ಕಾಂಗ್ರೆಸ್ಸಿಗರು ತಮ್ಮ ಅಭದ್ರ ಭವಿಷ್ಯದಿಂದ ಚಿಂತಿತರಾಗಿದ್ದಾರೆ. ಕಾಂಗ್ರೂನವರ ಪ್ರವೇಶದಿಂದ ತಮ್ಮ ಸ್ಥಿತಿ ಏನಾದೀತೋ ಎಂಬ ಶಂಕೆ ಅನೇಕರಿಗಿದೆ. ಏಕೆಂದರೆ ಕಾಂಗೈಗೆ ಪ್ರವೇಶ ಬಯಸಿರುವ ಕಾಂಗ್ರೂನವರು ಅನೇಕರು ಹಳಬರು. ಭವಿಷ್ಯದ ಬಗ್ಗೆ ಚಿಂತಿತ ಕಾಂಗೈನವರು ಕಾಂಗ್ರೂನವರ ಪ್ರವೇಶ ತಡೆಗಟ್ಟುವುದಕ್ಕಾಗಿ ನಂಬಿಕಸ್ಥ (Loylists)ರ ಸಮ್ಮೇಳನ ನಡೆಸುತ್ತಿದ್ದಾರೆ”.

ದ್ವಂದ್ವದಲ್ಲಿ ಮುಳುಗಿರುವ ಅನೇಕರಲ್ಲಿ ಭಾರೀ ನಂಬಿಗಸ್ಥ, ಪ್ರಧಾನಿಯ ಆಪ್ತನೆಂದು ಪರಿಗಣಿತನಾಗಿರುವ ಮಹಾರಾಷ್ಟ್ರದ ಮುಖ್ಯಮಂತ್ರಿ ಅಂತುಳೆಯವರೂ ಒಬ್ಬರು. ಇನ್ನಿತರ ಅನೇಕ ಮುಖ್ಯಮಂತ್ರಿಗಳಂತೆ ಅಂತುಳೆಯವರೂ ಭಿನ್ನಮತೀಯರ ಸಮಸ್ಯೆ ಎದುರಿಸುತ್ತಿದ್ದಾರೆ. ಸಂಪುಟವನ್ನು ಪುನಃರಚಿಸಬೇಕೆಂಬ ಅವರ ಬಯಕೆಯನ್ನು ಹೈಕಮಾಂಡ್ ತಳ್ಳಿಹಾಕಿದೆ.

ಎಕ್ಸ್‌ಪ್ರೆಸ್ ನ್ಯೂಸ್ ಸರ್ವೀಸ್‌ನ ದೆಹಲಿಯ ವರದಿಗಾರ ಈ ರೀತಿ ಬರೆದಿದ್ದಾರೆ: ಭಿನ್ನಮತೀಯರ ಸಮಸ್ಯೆ ಇನ್ನೂ ಆಳವಾಗಬಾರದೆಂಬ ಕಾರಣದಿಂದ ಹೈಕಮಾಂಡ್ ಉದ್ದೇಶಿಸಿದೆ. “ದೆಹಲಿಯ ಈ ನಿರ್ದೇಶನದಿಂದ ಭಿನ್ನಮತೀಯರಾದ ಆರ್ಥಿಕ ಮಂತ್ರಿ ಶ್ರೀ ರಾಮರಾವ್ ಆದಿಕ್‌ರಿಗೆ ಜಯದೊರೆತಂತಾಗಿದೆ. ಇದಾಗ್ಯೂ ಇತ್ತೀಚಿನ ಪತ್ರಿಕಾಗೋಷ್ಠಿಯಲ್ಲಿ ಸಂಪುಟ ಪುನಃರಚಿಸುವ ಕುರಿತು ಅಂತುಳೆ ಮಾತನಾಡಿದ್ದಾರೆ”.

ತೂಗುಯ್ಯಾಲೆಯಲ್ಲಿದ್ದ ರಾಜಸ್ಥಾನದ ಮುಖ್ಯಮಂತ್ರಿ ಪಹಾಡಿಯಾರನ್ನು ಕೊನೆಗೂ ಕೆಳಗಿಳಿಸಲಾಯಿತು. ಪಹಾಡಿಯಾ ರಾಜ್ಯದ ಕಾನೂನು ಸುವ್ಯವಸ್ಥೆ, ಭಿನ್ನಮತೀಯರ ಸಮಸ್ಯೆ ಮುಂತಾದುವುಗಳನ್ನು ನಿವಾರಿಸುವಲ್ಲಿ ಶೋಚನೀಯವಾಗಿ ವಿಫಲರಾಗಿದ್ದರು. ತನ್ನ ನಡುವಳಿಕೆ, ಹೇಳಿಕೆಗಳಿಂದ ರಾಷ್ಟ್ರದಾದ್ಯಂತ ಹಾಸ್ಯಾಸ್ಪದ ವ್ಯಕ್ತಿಯಾಗಿದ್ದ ಪಹಾಡಿಯಾರನ್ನು ಕೆಳಗಿಳಿಸಿ ಶಿವಚರಣ ಮಾಥೂರರನ್ನು ಮುಖ್ಯಮಂತ್ರಿಯಾಗಿ ನೇಮಿಸಲಾಗಿದೆ.

[ಕಡೇ ಪುಟ ನೋಡಿ]

ಸುರಕ್ಷಿತ ಕಾಡುಗಳಿಂದ ಸಚಿವರ ಪ್ರಭಾವದಲ್ಲಿ ಅರಣ್ಯಸಂಪತ್ತಿನ ದರೋಡೆ

ಬೆಳ್ತಂಗಡಿ ತಾಲ್ಲೂಕಿನ ಮಲವಂತಿಗೆ, ಕಡಿರುಉದ್ಯಾವರ ಮತ್ತು ಮಿತ್ತಬಾಗಿಲು ಗ್ರಾಮಗಳ ಸರಕಾರಿ ಸುರಕ್ಷಿತ ಕಾಡುಗಳಿಂದ ಇದ್ದಕಿದ್ದಂತೆ ಬೆಲೆ ಬಾಳುವ ಅತಿ ದೊಡ್ಡ ದೊಡ್ಡ ಮರಗಳು ಕಾಣೆಯಾಗಲು ಪ್ರಾರಂಭವಾಗಿದೆ. ಸ್ಥಳೀಯ ನಾಗರೀಕರು ಮೊದಲೇ ಸಾಯಿಬಾಬನ ಪವಾಡವನ್ನು ಅರಿತವರು, ನಮ್ಮೂರಿಗೆ ಯಾರೋ ಸಾಯಿಬಾಬಾ ಬಂದಿರುವುದಾಗಿ ಶೋಧಿಸಲು ಹೊರಟರು. ಆದರೆ ತಾವು ಕಂಡ 'ಸಾಯಿಬಾಬ' ಯಾರುಗೊತ್ತೇ? ಮಾನ್ಯ ಯುವಜನ ಮಂತ್ರಿಗಳಾದ ಶ್ರೀ ಗಂಗಾಧರ ಗೌಡರ ಭಾವ ಮೈದುನರಾದ ಶ್ರೀ ರಾಮಕೃಷ್ಣನವರು. ತಮ್ಮ ಭಾವನವರು ಕರ್ನಾಟಕ ಸರಕಾರದ (ಅ)ಯೋಗ್ಯ ಮಂತ್ರಿಗಳಾದ ಗಂಗಾಧರ ಗೌಡರ ಪ್ರಭಾವವಿರುವಾಗ ತಮ್ಮ ಪವಾಡ ನಡೆಸಲು ಯಾರ ಅಡ್ಡಿ ತಾನೆ ಇದೆ? ಬೆಳ್ತಂಗಡಿ ತಾಲ್ಲೂಕಿನ ಅರಣ್ಯದಲ್ಲಿ ನೆರೆಕರೆಯ ಜನರು ಸೌದೆ ತರಲು ಕಾಡಿಗೆ ಹೋದರೆ ಅವರ ಕೈಯಿಂದ ಕತ್ತಿ ಮತ್ತು ಇತರ ಸಾಮಗ್ರಿ ಕಿತ್ತುಕೊಂಡು ಮನೆಗೆ ಕಳಿಸಿ; ಅವರ ಮನೆಯಿಂದ ಕೋಳಿ, ತರಕಾರಿ ತರಿಸಿ ಪುನಃ ಅವರ ಮೇಲೆ ಕೇಸು ಹಾಕುವ ಫಾರೆಸ್ಟ್ ಸಿಬ್ಬಂದಿಗಳು ಇರುವಾಗ ಇವರ ಆಟ ಗೌಡರ ಮುಂದೆ ಹೇಗೆ ನಡೆಯುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ಕೋಳಿ ಮುಖ್ಯವಲ್ಲ ಅವರ ನೌಕರಿ ಮುಖ್ಯ ಅಲ್ಲವೇ?

ಆದರೆ ಈ ಪವಾಡವನ್ನು ಅರಿತ ನಾಗರೀಕರು ತಮ್ಮ ಕಣ್ಣಮುಂದೆ ಕಡಿಮೆ ಪಕ್ಷ 12 ಲಾರಿಗಳಷ್ಟು ಬೆಲೆ ಬಾಳುವ ಮರಗಳನ್ನು ಕಡಿದು ಸಾಗಿಸುವಾಗ ಸುಮ್ಮನಿದ್ದರೇ? ಪ್ರತಿಪಕ್ಷ ನಾಯಕರುಗಳು ಸೇರಿ ತಮ್ಮಲ್ಲಿ ಚರ್ಚಿಸಿ ಲಿಖಿತ ಫೋನೋಗ್ರಾಮ್ ಮತ್ತು ಇತರ ವಿಧಾನಗಳ ಮೂಲಕ ಕರ್ನಾಟಕ ರಾಜ್ಯದ ಮುಖ್ಯ ಅರಣ್ಯಾಧಿಕಾರಿಗಳಿಗೆ ಡಿ. ಎಫ್. ಒ. ಮತ್ತು ಇತರ ಫಾರೆಸ್ಟ್ ಅಧಿಕಾರಿಗಳಿಗೆ ತಿಳಿಸಲಾಯಿತು. ಅಲ್ಲದೆ ತುರ್ತುಕ್ರಮ ಕೈಗೊಳ್ಳಲು ಒತ್ತಾಯಿಸಲಾಯಿತು. ಆದರೆ ಜನರ ಕಣ್ಣಿಗೆ ಮಣ್ಣೆರಚಬೇಕಲ್ಲವೇ? ಸ್ಥಳೀಯ ಫಾರೆಸ್ಟ್ ಸಿಬ್ಬಂದಿಗಳು ಮರಕಡಿಯುವ ಸ್ಥಳಕ್ಕೆ ಭೇಟಿನೀಡಿ ಕೇವಲ ಒಂದೇ ಒಂದು ಬೀಟೆ ಮರವನ್ನು ಸ್ವಾಧೀನಪಡಿಸಿಕೊಂಡು ಮರ ಕಡಿಯುವ ಕೆಲಸಗಾರರನ್ನು ಪೋಲೀಸ್ ಕಸ್ಟಡಿಗೆ ಒಪ್ಪಿಸಿರುತ್ತಾರೆ. ಪ್ರಭಾವಿ ರಾಜಕಾರಣಿ ಮತ್ತು ಸಚಿವರಾದ ಮಾನ್ಯ ಗೌಡರ ಅಪ್ಪಣೆಗಾಗಿ ಮುಂದಿನ ಕ್ರಮ ಕೈಗೊಳ್ಳಲು ಕಾಯಬೇಕಾಗಿರುವುದು ಅಗತ್ಯವಲ್ಲವೇ? (ಇಲ್ಲದಿದ್ದರೆ ಇವರಿಗೆ ನೌಕರಿಗೆ ಆಪತ್ತಲ್ಲವೇ?)

ಕಳೆದ ಜೂನ್ 17ರಂದು ಸುಳ್ಯದಲ್ಲಿ ದಿ. ಸಂಜಯಗಾಂಧಿಯ ಪುಣ್ಯತಿಥಿಯ ವಾರ್ಷಿಕೋತ್ಸವದ ಸ್ಮರಣಾರ್ಥವಾಗಿ ಏರ್ಪಡಿಸಿದ ಸಮಾರಂಭದಲ್ಲಿ ನಮ್ಮ (ಅ)ಯೋಗ್ಯ ಮಂತ್ರಿವರ್ಯರಾದ ಗಂಗಾಧರಗೌಡರು ಮಾಡಿದ ಭಾಷಣವೇನು? "ಪ್ರತಿಯೊಬ್ಬ ನಾಗರೀಕನು ವರ್ಷಕ್ಕೆ ನಾಲ್ಕಾದರೂ ಗಿಡಗಳನ್ನು ನೆಟ್ಟು ಅರಣ್ಯ ಸಂಪತ್ತು ಬೆಳೆಸದಿದ್ದರೆ ಮಳೆ ಇಲ್ಲದೆ ಊರಿಗೇ ಬರಗಾಲ ಬಂದೀತು" ಹಾಗೂ "ಹೀಗೆ ಕಾಡುಗಳನ್ನು ಬೆಳೆಸಿದರೆ ಮಾತ್ರ ದಿ. ಸಂಜಯಗಾಂಧಿಯವರ ಆತ್ಮಕ್ಕೆ ಶಾಂತಿ ದೊರಕೀತು" ಎಂದು ನಾಗರೀಕರಿಗೆ ಉಪದೇಶ ನೀಡಿದ್ದಾರೆ. ತನ್ನ ಮಾತಿನಂತೆ ನಡೆಯುವುದರಲ್ಲಿ (ಕು)ಪ್ರಸಿದ್ಧರಾದ ಸಚಿವರು ಬಹುಶಃ ಬೆಳ್ತಂಗಡಿ ತಾಲ್ಲೂಕಿಗೆ ನೆರೆ ಬಂದೀತೋ? ಎಂಬ ಭೀತಿಯಿಂದ ಸರಕಾರಿ ಸುರಕ್ಷಿತ ಕಾಡುಗಳನ್ನು ಕಡಿಸಿ ತಮ್ಮ ಸ್ವಂತ ಜಮೀನಿನಲ್ಲಿ ಸಾಲದಕ್ಕೆ ತಮ್ಮ ಭಾವಮೈದುನ ರಾಮಕೃಷ್ಣನಿಗಾಗಿ ಸರಕಾರಿ ಜಮೀನಿನಲ್ಲಿ ಕಟ್ಟಿಸಿರುವ ಒಂದು ಬಂಗಲೆಯೂ ಸೇರಿ ಮೂರು ಸಣ್ಣ ಜೋಪಡಿಗಳನ್ನು ಕಟ್ಟುವ ತುರಾತುರಿ ಕೆಲಸಕ್ಕೆ ನೇಮಿಸಿದ್ದಾರೆ. (ಸ್ವತಃ ಮಾಡಲು ಅವರಿಗೆಲ್ಲಿ ಪುರುಸೋತ್ತು?) ಪಾಪ ಬಡವರ ಪ್ರತಿನಿಧಿ ಗಂಗಾಧರ ಗೌಡರು ಈ ಮರಗಳನ್ನು ಕ್ರಯಕ್ಕೆ ಪಡೆದುದಾಗಿ ಸ್ಥಳೀಯ ಉಜಿರೆಯ ಮರದಮಿಲ್ಲಿನ ಮಾಲಕರೊಬ್ಬರು ಬಿಲ್ಲು ಒದಗಿಸಿರುತ್ತಾರಂತೆ. ಭದ್ರಾವತಿಯಲ್ಲಿ ಮಾನ್ಯ ಸಚಿವರಾದ ಇಬ್ರಾಹಿಂರಿಂದ ಆದ ಅನಾಚಾರವನ್ನು ಮುಚ್ಚಿಡಲು ಮಾಡಿದ ಕರ್ತವ್ಯನಿಷ್ಠೆಯು ಇಲ್ಲಿಯೂ ನಡೆಯುತ್ತಿದೆಯೇ?

ಬೆಳ್ತಂಗಡಿ ತಾಲ್ಲೂಕಿನ ನಾಗರೀಕರು ಈ ಅರಣ್ಯಾಪಹರಣವನ್ನು ಖಂಡಿಸಿ ನಿಜವಾದ ನ್ಯಾಯಕ್ಕೆ ಒತ್ತಾಯಿಸುತ್ತಿದ್ದಾರೆ. ಯಾರು ಈ ಅರಣ್ಯ ದರೋಡೆ ನಡೆಸಿದ್ದಾರೋ ಅವರಿಗೆ ಯೋಗ್ಯ ಶಿಕ್ಷೆ ಆಗಲೇಬೇಕು. ಮಾನ್ಯ ಮಂತ್ರಿಯವರು ತನ್ನ ಪ್ರಭಾವವನ್ನು ಇಂತಹ ದರೋಡೆ ತನದ ಕೆಲಸಕ್ಕೆ ಉಪಯೋಗಿಸಿದರೆ ಜನರು ಇದನ್ನು ಅರಿಯಲಾರದಷ್ಟು ಮೂರ್ಖರಲ್ಲ ಎಂಬುದನ್ನು ಅವರು ಮನಗಾಣಬೇಕು. ಇಂತಹ ಗಂಭೀರ ಅಪರಾಧಗಳ ಬಗ್ಗೆ ಯೋಗ್ಯ ತನಿಖೆ ನಡೆಸಿ ಬಡವರ ಉದ್ಧಾರದ ಹೆಸರಿನಲ್ಲಿ ಸಾರ್ವಜನಿಕ ಸೊತ್ತನ್ನು ಲೂಟಿ ಮಾಡುವ ಈ ಕಾಂಗ್ರೆ ಮುಖಂಡರ ನಿಜಬಣ್ಣವನ್ನು ಬಯಲಿಗೆಳೆಯಬೇಕೆಂದು ಬೆಳ್ತಂಗಡಿ ತಾಲ್ಲೂಕು ರೈತ ಸಂಘ, ಬೀಡಿ ಕೆಲಸಗಾರರ ಸಂಘ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತೀವ್ರವಾಗಿ ಒತ್ತಾಯಿಸುತ್ತದೆ.

ಈ ಅನ್ಯಾಯದ ತನಿಖೆಯಲ್ಲಿ ಫಾರೆಸ್ಟ್ ಅಧಿಕಾರಿಗಳಾಗಲಿ ಅಥವಾ ಕಾಂಗ್ರೆಸ್ ಸರಕಾರವಾಗಲೀಯಾವುದೇ ಸ್ವಜನಪಕ್ಷಪಾತ ಅಥವಾ ರಾಜಕೀಯ ಪ್ರಭಾವವನ್ನು ಬೀರಿ ಪ್ರಕರಣವನ್ನು ಮುಚ್ಚಲು ಪ್ರಯತ್ನಿಸಿದರೆ ಬೆಳ್ತಂಗಡಿ ತಾಲ್ಲೂಕಿನ ಜನತೆ ಮತ್ತು ನಾಗರೀಕರು ತೀವ್ರ ಚಳುವಳಿಗೆ ಇಳಿಯಬೇಕಾಗುತ್ತದೆ. ಇದೀಗ ರಾಜ್ಯದಲ್ಲಿ ಬುಗಿಲೆದ್ದಿರುವ ಇಬ್ರಾಹಿಂ ಪ್ರಕರಣದಂತೆ ಬೆಳ್ತಂಗಡಿಯಿಂದ ಆರಂಭಗೊಂಡು ರಾಜ್ಯದಾದ್ಯಂತ ಗಂಗಾಧರ ಗೌಡರ ಗಂಡಾಂತರಾಯಣಕ್ಕೆ ನಾಂಧಿಯಾದೀತು ಎಂಬುದಕ್ಕೆ ಸಂಶಯವಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸರಕಾರ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿ.

●

ಇಬ್ರಾಹಿಂ ವಜಾಕ್ಕೆ ಒತ್ತಾಯ

ಬೀದರ

ಭ್ರಷ್ಟಮಂತ್ರಿ ಇಬ್ರಾಹಿಂ ವಜಾವನ್ನು ಒತ್ತಾಯಿಸಿ ಸಿ.ಪಿ.ಐ.(ಎಂ), ಸಿ.ಪಿ.ಐ., ಕಾಂಗ್ರೆಸ್ ಮತ್ತು ಜನತಾ ಪಕ್ಷಗಳ ನೇತೃತ್ವದಲ್ಲಿ ಜುಲೈ15ರಂದು "ಬೀದರ್ ಬಂದ್" ಆಚರಿಸಲಾಯಿತು. ನಗರದ ಅಂಬೇಡ್ಕರ ಚೌಕದಿಂದ ಡಿ.ಸಿ. ಆಫೀಸ್‌ವರೆಗೆ ದೊಡ್ಡ ಮೆರವಣಿಗೆಯನ್ನು ಹೊರಡಿಸಲಾಗಿತ್ತು.

ಈ ಸಂದರ್ಭದಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಕಾಂ. ಸಂಗ್ರಾಮ, ಸುಂದರರಾಜು, ಸಿ.ಪಿ.ಐ. ವತಿಯಿಂದ ವಿ. ಎನ್. ಪಾಟೀಲ, ಜನತಾ ಪಕ್ಷದಿಂದ ಕಾಶೀನಾಥರಾವ ಬೇಲೂರೆ ಮತ್ತು ಕಿಶನ್ ರಾವ್, ಕಾಂಗ್ರೆಸ್‌ನ ಬಾಬೂರಾವ್ ಬೆಂಬೂಳಿ ಮತ್ತು ಡಿ. ಕ್ರಿಸ್ಟಿಯವರು ಮಾತನಾಡಿ ಗುಂಡೂರಾವ್‌ರ ಕಾರ್ಯವೈಖರಿಯನ್ನು ಕಟುವಾಗಿ ಟೀಕಿಸಿದರು. ಎಲ್ಲ ರಂಗಗಳಲ್ಲೂ ವಿಫಲರಾಗಿರುವ ಗುಂಡೂರಾವ್ ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಿದರು.

ಚಿಕ್ಕಬಳ್ಳಾಪುರ

ನಾಗರಿಕ ಸಮಿತಿಯ ಕರೆಯ ಮೇರೆಗೆ ಇಬ್ರಾಹಿಂ ವಜಾ ಮತ್ತು ಎಫ್. ಎಂ. ಖಾನ್‌ರ ಮೇಲೆ ಕ್ರಮಕ್ಕೆ ಒತ್ತಾಯಿಸಿ ಚಿಕ್ಕಬಳ್ಳಾಪುರ ಬಂದ್ ಆಚರಿಸಲಾಯಿತು. ಬಂದ್ ಸಂಪೂರ್ಣ ಯಶಸ್ವಿಯಾಗಿ ಎಲ್ಲ ವಹಿವಾಟುಗಳು ಸ್ಥಗಿತವಾಗಿದ್ದವು.

ಸಾಯಂಕಾಲ 6 ಘಂಟೆಗೆ ವಿ. ಸಿ. ತಿಮ್ಮರಾಯಪ್ಪನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಸಿ.ಐ.ಟಿ.ಯು. ರಾಜ್ಯಸಮಿತಿಯ ಅಧ್ಯಕ್ಷ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾಂ. ಸೂರ್ಯನಾರಾಯಣರಾವ್, ಪ್ರಾಂತ ರೈತ ಸಂಘದ ಅಧ್ಯಕ್ಷ ಕಾಂ. ಮುಗುಳಪ್ಪ, ಕಾಂಗ್ರೆಸ್‌ನ ಕೆ. ಎಂ. ಮುನಿಯಪ್ಪ, ಜನತಾದ ಕೆ. ಎಂ. ಪುಟ್ಟಸ್ವಾಮಿಯವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮಾಜಿ ಪುರಸಭಾ ಸದಸ್ಯರಾದ ಜಿ. ಎನ್. ವೆಂಕಟರಾಮುಲುರವರು ಆರಂಭದಲ್ಲಿ ಸ್ವಾಗತಿಸಿದರು. ಕೊನೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾಂ. ಲಕ್ಷ್ಮಯ್ಯ ವಂದಿಸಿದರು.

ಪುತ್ತೂರು

ಮಹಿಳೆಯರ ಮೇಲೆ ಅತ್ಯಾಚಾರ, ವ್ಯಾಪಕ ಭ್ರಷ್ಟಾಚಾರ, ಕಾನೂನು ಉಲ್ಲಂಘನೆಗೆ ಕಾರಣರಾಗಿರುವ ಮಂತ್ರಿ ಇಬ್ರಾಹಿಂರ ವಜಾಕ್ಕೆ ಹಾಗೂ ಗೂಂಡಾ ಎಫ್. ಎಂ. ಖಾನ್‌ರ ಮೇಲೆ ಕ್ರಮಕ್ಕೆ ಒತ್ತಾಯಿಸಿ ಜಿಲ್ಲಾದ್ಯಂತ ನಡೆದ ಬಂದ್‌ನ ಅಂಗವಾಗಿ ಪುತ್ತೂರು ತಾಲ್ಲೂಕಿನಾದ್ಯಂತ ದ.ಕ. ಬಂದ್ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಬಂದ್‌ಗೆ ಪೂರಕವಾಗಿ ಹಿಂದಿನ ದಿನ (8-7-81)ರಂದು ವಿದ್ಯಾರ್ಥಿ ಸಂಘಟನೆಗಳಾದ ಎಸ್.ಎಫ್.ಐ. ಮತ್ತು ಎ.ಬಿ.ವಿ.ಪಿ. ಮತ್ತು ನಾಗರಿಕ ಸುರಕ್ಷಾ ಸಮಿತಿಯ ವತಿಯಿಂದ ಸಭೆ ನಡೆಯಿತು. ಸಭೆಯಲ್ಲಿ ಸಿ. ಪಿ. ಐ. (ಎಂ)ನ ಕಾಂ. ರಾಮಕೃಷ್ಣ, ಬಿ. ಜೆ. ಪಿ.ಯ ಕೆ. ದೇವಪ್ಪ, ಜನತಾದ ಅಟ್ಟುಕುಂಞ, ವಿದ್ಯಾರ್ಥಿ ಪರಿಷತ್‌ನ ವೆಂಕಟಕೃಷ್ಣ ಇವರುಗಳು ಮಾತನಾಡಿದರು. ಕೊನೆಯಲ್ಲಿ ಸಚಿವ ಇಬ್ರಾಹಿಂರ ಪ್ರತಿಕೃತಿಯನ್ನು ಸಾರ್ವಜನಿಕರೆದುರು ಸುಡಲಾಯಿತು.

●

ವಜಾ ವಿರುದ್ಧ ಪ್ರತಿಭಟನೆ

ಮಂಗಳೂರಿನ ಸಿ. ಪಿ. ಸಿ. ಕಂಪನಿಯಲ್ಲಿ 12 ವರ್ಷಗಳಿಂದ ಕ್ಲಾರ್ಕ್ ಆಗಿ ಕೆಲಸ ಮಾಡುತ್ತಿದ್ದ ಶ್ರೀ ಶಾಂತರಾಮ್‌ರನ್ನು ವಜಾಮಾಡಿರುವುದನ್ನು ಪ್ರತಿಭಟಿಸಿ ಸದ್ರಿ ಕಂಪನಿಯ ಎಲ್ಲ ಕೆಲಸಗಾರರು ಜುಲೈ 21ರಂದು ಮುಷ್ಕರ ನಡೆಸಿದರು.

ಸಿ. ಪಿ. ಸಿ. ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಸಂಜೀವ ಕುಡ್ವರ ಮನೆಯ ಎದುರು ಕೆಲಸಗಾರರು ಪ್ರದರ್ಶನ ನಡೆಸಿದರು. ಸಾಯಂಕಾಲ ಯೂನಿಯನ್ ಆಫೀಸಿನಲ್ಲಿ ಕಾಂ. ಪಿ. ರಾಮಚಂದ್ರರಾವ್‌ರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಸಿ.ಪಿ.ಸಿ. ಮ್ಯಾನೇಜ್‌ಮೆಂಟಿನ ಕ್ರಮವನ್ನು ಖಂಡಿಸಲಾಯಿತು. ○

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ರಾವ್ ಸರಕಾರದ ದುಷ್ಕೃತ್ಯ ಪ್ರತಿಭಟನೆ

ಮಹಿಳೆಯರ ಮತಪ್ರದರ್ಶನ - ಬಂಧನ

ಸಚಿವ ಇಬ್ರಾಹಿಂ ವಜಾಕ್ಕೆ ಮತ್ತು ದಿನೇ ದಿನೇ ರಾಜ್ಯದಲ್ಲಿ ಹೆಚ್ಚುತ್ತಿರುವ ಆತಂಕಕಾರಿ ಘಟನೆಗಳನ್ನು ಪ್ರತಿಭಟಿಸಿ ದಿನಾಂಕ 22-7-81ರಂದು ರಾಜ್ಯದ ವಿವಿಧ ಮಹಿಳಾ ಸಂಘಟನೆಗಳು ಬೆಂಗಳೂರಿನಲ್ಲಿ ಮತಪ್ರದರ್ಶನ ನಡೆಸಿದವು. ನಿಷೇದಾಜ್ಞೆ ಉಲ್ಲಂಘಿಸಿದ ಆಪಾದನೆ ಮೇರೆಗೆ ಪ್ರದರ್ಶನಕಾರರನ್ನು ಪೋಲೀಸರು ಬಂಧಿಸಿದ್ದಾರೆ.

ಕರ್ನಾಟಕ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಮತ್ತು ವಿರೋಧ ಪಕ್ಷಗಳ ಮಹಿಳಾ ವಿಭಾಗಗಳಿಗೆ ಸೇರಿದ ಸುಮಾರು 500 ಮಹಿಳೆಯರು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ರಾಜ್ಯಪಾಲ ಗೋವಿಂದನಾರಾಯಣರಿಗೆ ಮನವಿ ಸಲ್ಲಿಸಿದರು.

ಇತ್ತೀಚಿಗೆ ಇಬ್ರಾಹಿಂ ಮನೆ ಎದುರು ಮತಪ್ರದರ್ಶನ ನಡೆಸಿದ್ದ ಮಹಿಳೆಯರನ್ನು "ಬಾಡಿಗೆ ಹೆಣ್ಣು"ಗಳೆಂದು ಮೂದಲಿಸಿದ್ದ ಕಾಗೋಡು ತಿಮ್ಮಪ್ಪ ಕ್ಷಮೆಕೋರಬೇಕೆಂದು ಈ ಮಹಿಳೆಯರು ಘೋಷಣೆ ಕೂಗುತ್ತಿದ್ದರು.

ಮತಪ್ರದರ್ಶನ ನಡೆಸುತ್ತಿದ್ದ ಮಹಿಳೆಯರನ್ನು ಪೋಲೀಸರು ಬಂಧಿಸಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಮತ್ತು ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್ ಜಂಟೀ ಹೇಳಿಕೆಯೊಂದನ್ನು ಹೊರಡಿಸಿ ಉಗ್ರವಾಗಿ ಖಂಡಿಸಿದ್ದಾರೆ. ಪ್ರತಿಭಟನೆಯನ್ನು ದಬ್ಬಾಳಿಕೆಯಿಂದ ಹತ್ತಿಕ್ಕಬಹುದೆಂದು ಗುಂಡೂರಾವ್ ತಿಳಿದಿದ್ದರೆ ಅದು ಅವರ ಮೂರ್ಖತನವಷ್ಟೇ ಎಂದವರು ತಿಳಿಸಿದ್ದಾರೆ.

ಪಾಕಿಸ್ತಾನದ ಪ್ರಗತಿಪರ ಲೇಖಕರು

ಉರ್ದು ಸಾಹಿತ್ಯವೆಂದರೆ ಜನರ ಮನಸ್ಸಿಗೆ ಬರುವುದು ಶೇರ್, ಶಾಯರಿಗಳು. ಇವುಗಳನ್ನು ಕನ್ನಡದಲ್ಲಿ ಹನಿಗವಿತೆಗಳೆಂದು ಹೇಳಬಹುದು. ಬಹುತೇಕ ಹನಿಗವನಗಳು ಶೃಂಗಾರ ರಸವನ್ನೇ ಅಭಿವ್ಯಕ್ತಿಸುವುದರಿಂದ ಅದರ ಹಿನ್ನಲೆಯಾದ ದೆಹಲಿ, ಲಕ್ನೊ, ಹೈದರಾಬಾದಿನ ಮುಸ್ಲಿಮರ ರಸಿಕತೆ, ಆಗಿನ ನವಾಬರ ದೌಲತ್ತುಗಳೇ ಜನರ ಕಣ್ಣಿನಲ್ಲಿ ಹಾದುಹೋಗುವುದು ಸಹಜ.

ದೆಹಲಿಯಲ್ಲಿ ಮೊಘಲರ ಅವನತಿಯೊಂದಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಹಿಡಿತ ಇಡೀ ಭಾರತದಲ್ಲಿ ಭದ್ರವಾಯಿತು. ಮತ್ತೆ ಮೊಘಲರ ಕಾಲದ ವೈಭವವನ್ನು ಕಾಣುವ ಮುಸ್ಲಿಮರ ಕನಸ್ಸು ನುಚ್ಚುನೂರಾಯಿತು. ಲಕ್ನೊ, ಹೈದರಾಬಾದ್‌ಗಳಷ್ಟೇ ಅಲ್ಲದೆ ಲಾಹೋರ್, ಕರಾಚಿ, ಪೇಷಾವರ್, ಸಿಂಧ್ ಪ್ರಾಂತ್ಯಗಳ ಮುಸ್ಲಿಮರು ಇದರಿಂದ ರೊಚ್ಚಿಗೆದ್ದದ್ದೇ ಅಲ್ಲದೇ ಮತ್ತೆ ತಮ್ಮ ಗತ ವೈಭವವನ್ನು ಸ್ಥಾಪಿಸುವ ಹಂಬಲ ತಾಳಿದರು. ಈ ಆಸೆಯೇ ಅವರನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವಂತೆ ಮಾಡಿದ್ದು. ಬ್ರಿಟಿಷರ ವಿರುದ್ಧ ನಡೆದ ಖಿಲಾಫತ್ ಚಳುವಳಿಯಲ್ಲಿ ಹೆಚ್ಚು, ಹೆಚ್ಚು ಮುಸ್ಲಿಮರು ಭಾಗವಹಿಸುವಂತೆ ಮಾಡಿದ್ದು. ಖಿಲಾಫತ್ ಚಳುವಳಿಯ ಅಂಗವಾಗಿ ತುರ್ಕಿಗೆ ಹೊರಟ ಮುಜಾಹಿರರು ರಷ್ಯಾದ ಕ್ರಾಂತಿಯಿಂದ ಸ್ಫೂರ್ತಿಗೊಂಡು ಟಾಷ್ಕೆಂಟಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು ನೆರವಾದರು.

ಆದರೆ, ಭಾರತದಲ್ಲಿ ಕಟ್ಟಾ ಸಂಪ್ರದಾಯವಾದಿ ಮುಸ್ಲಿಮರ ಸಂಘಟನೆಯಿಂದ, ಮೊಹಮ್ಮದಾಲಿ ಜಿನ್ನಾರವರ ಅಪಕ್ವ ಆದರ್ಶಗಳಿಂದ ದೇಶ ಇಬ್ಭಾಗವಾಯಿತು. ಅನೇಕ ರಾಷ್ಟ್ರೀಯವಾದಿ, ಸ್ವಾತಂತ್ರ್ಯಪ್ರೇಮಿ, ಪ್ರಗತಿಪರ ಮುಸ್ಲಿಮರ ಮನನೊಂದಿತು. ಆದರೂ ಅನಿವಾರ್ಯ ಪ್ರಸಂಗವನ್ನು ಅನುಸರಿಸಿ ಬಹುತೇಕ ಮುಸ್ಲಿಂ ಸಾಹಿತಿಗಳು, ವಿದ್ವಾಂಸರು ಹೊಸ ಕನಸುಗಳೊಂದಿಗೆ ಪಾಕಿಸ್ತಾನವನ್ನು ಪ್ರವೇಶಿಸಿದರು. ಇಲ್ಲಿಗೆ ಭಾರತದಲ್ಲಿ ಉರ್ದು ಸಾಹಿತ್ಯವನ್ನು ಬೆಳಗುತ್ತಿದ್ದ ಬಹುತೇಕ ಪ್ರಗತಿಪರ ಲೇಖಕರ ನಿರ್ಗಮನವಾಯಿತು. ಹೀಗೆ ಭಾರತವನ್ನು ತ್ಯಜಿಸಿದವರಲ್ಲಿ "ಸಾರೇಂ ಜಹಾಂ ಸೆ ಅಚ್ಛಾ ಹಿಂದೂಸ್ತಾನ್ ಹಮಾರಾ" (ವಿಶ್ವದಲ್ಲಿ ನಮ್ಮ ಹಿಂದುಸ್ತಾನವೇ ಅತಿ ಸುಂದರ)ವೆಂದು ಹಾಡಿದ ಕವಿ ಇಕ್ಬಾಲ್ ಹಾಗೂ "ಈಸ್ಟ್ ಇಂಡಿಯಾ ಕುಂಪನಿಕೇ ಫರ್ಜಂದೋಂಕೆ ನಾಮ್.." (ಈಸ್ಟ್ ಇಂಡಿಯಾ ಕಂಪನಿಯ ಪುತ್ರರ ಹೆಸರಿಗೊಂದು ಪತ್ರ) ಕವನದಿಂದ ಖ್ಯಾತರಾಗಿದ್ದ ಜೋಷ್‌ಮಲಿಹಾಬಾದಿ ಮುಂತಾದವರು ನಮ್ಮಿಂದ ದೂರವಾದರು. ಸ್ವಾತಂತ್ರ್ಯಪ್ರೇಮಿ ಲೇಖಕರ ಸುಂದರ ಕನಸುಗಳು ಭಗ್ನವಾದವು.

ಭಾರತದಲ್ಲಿ ಸ್ವಾತಂತ್ರ್ಯಾನಂತರ ಅನೇಕ ರಾಜಕೀಯ ಏರುಪೇರುಗಳಾದರೂ ಉರ್ದು ಸಾಹಿತ್ಯದಲ್ಲಿ ಅಂತಹ ಗಮನಾರ್ಹ ರಾಜಕೀಯ ಪ್ರೇರಿತ ಕಾವ್ಯ ಇದುವರೆಗೆ ಉದಿಸಲಿಲ್ಲ. ಇದಕ್ಕೆ ಕಾರಣ ಬಹುಶಃ ಉರ್ದು ಮಾತನಾಡುವ ಜನರಲ್ಲಿ ಅಥವಾ ಪ್ರದೇಶದಲ್ಲಿ ಎಡಪಂಥೀಯ ಚಳುವಳಿ ಅಷ್ಟು ಪ್ರಬಲವಾಗಿಲ್ಲದಿರುವುದೇ ಕಾರಣವಾಗಿರಬಹುದು.

ಆದರೆ ಪಾಕಿಸ್ತಾನದಲ್ಲಿ ಸರ್ವಾಧಿಕಾರವನ್ನು ಎದುರಿಸಿ ಪ್ರಗತಿಪರ ಕಾವ್ಯ ಮತ್ತೆ ತಲೆ ಎತ್ತಿದೆ. ಯಾವ ಸುಂದರ ಸ್ವತಂತ್ರ ರಾಷ್ಟ್ರವನ್ನು ನೆನೆಸಿಕೊಂಡು, ಇಬ್ಭಾಗವಾದ ದುಃಖವನ್ನು ಸಹಿಸಿಕೊಂಡು ಪಾಕಿಸ್ತಾನಕ್ಕೆ ಹೋದರೋ ಆ ಕಲ್ಪನೆಗಳೆಲ್ಲಾ ನುಚ್ಚುನೂರಾಗಿವೆ. ಅದರಲ್ಲೂ ಭಾರತದಲ್ಲಿ ಬಂಧು-ಬಳಗ, ಆಸ್ತಿ-ಪಾಸ್ತಿಗಳನ್ನು ತೊರೆದು ಹೋದ ನಿರಾಶ್ರಿತರು ಕರಾಚಿ (ಬೆಳಕಿನ ನಗರ)ಯನ್ನು ಕಂಡು ಅನುಭವಿಸಿದ ನಿರಾಶೆ ಅಪಾರ. ಹೀಗೆ ತೀವ್ರ ನಿರಾಶೆಗೊಂಡ ನಿರಾಶ್ರಿತ ಕವಿಯೊಬ್ಬ ಕರಾಚಿಯನ್ನು ಕಂಡು ಹೀಗೆ ಹೇಳುತ್ತಾನೆ:

ಆಪ್ ಕೆ ಷಹರ್ ಮೆಂ ರೌನಕ್ ತೋ
ಬಹುತ್ ಹೈ
ಲೇಕಿನ್ ಅಪ್ನ ಘರ್ ಕೆ ದರೋ-
ದಿವಾರ್ ಕಹಾಂಸೆ ಲಾವೋಂ.

(ನಿಮ್ಮ ನಗರದಲ್ಲಿ ಬೆಳಕೇನೋ ಇದೆ ಆದರೆ ಇದನ್ನು ನನ್ನ ಊರೆಂದು ಹೇಗೆ ಹೇಳಲಿ ?)

ಅಲಹಾಬಾದಿನಿಂದ ವಲಸೆಹೋದ ಕವಿ ಮುಸ್ತಫಾ ಜೈದಿ ತನ್ನ ಹೊಸ ಊರಿನಲ್ಲಿ ಅನುಭವಿಸಿದ ನೋವು, ಸಂಕಟಗಳನ್ನು ತಮ್ಮ ಕವನಗಳಲ್ಲಿ ತೋಡಿಕೊಂಡಿದ್ದಾರೆ. ಅವರ ಕವನವೊಂದರ ಸಾಲು:

ಪ್ಯಾಸ್ ಐಸಿ ಕಿ
ಜುಬಾಂ ಮುಹುಂಸೆ ನಿಕಲ್ ಆಯೀ
ಹೈ
ಕೊಯಿ ಕುಲ್‌ಸುಮರ್, ಕೊಯಿ
ದರಿಯಾ
ಕೊಯಿ ಖತರಾ ಮದಾ ದೇ,

(ಬಾಯಾರಿ ನಾಲಿಗೆ ಹೊರಬಂದಿದೆ, ಇದನ್ನು ನಣಿಸುವ ಹನಿನೀರಿನ ಆಸೆಯೂ ಕಾಣದಾಗಿದೆ)

1950ರಲ್ಲಿ ಭಾರತದಲ್ಲಿ ಅಖ್ತರ್-ಉಲ್-ಇಮಾನ್ ಹಾಗೂ ಪಾಕಿಸ್ತಾನದ ನಾಸಿರ್ ಖಾಜ್ಮಿಯವರ ಕಾವ್ಯ ತುಂಬಾ ಜನಪ್ರಿಯವಾಗಿತ್ತು. ನಾಸಿರ್ ಖಾಜ್ಮಿಯವರು ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವ್ಯಕ್ತಿ. ಪಾಕಿಸ್ತಾನಕ್ಕೆ ತೆರಳಿದ ನಂತರ ತಾವು ರಾಜಕಾರಣಿಗಳ ಕೈಗೊಂಬೆಯಾದೆನೆಂಬ ಶಂಕೆ ಆವರಿಸಿ ಇತ್ತಿತ್ತಲಾಗಿ ಅಂತರ್ಮುಖಿಯಾಗುತ್ತಾ ಹೋಗುತ್ತಿದ್ದಾರೆ. ಅವರ ಅಂತರ್ಮುಖಿತನ, ಏಕಾಂಗಿತನವನ್ನು ಬಿಂಬಿಸುವ ಅವರ ಕವನವೊಂದು ಹೀಗಿದೆ:

ಹಂ ಜಾಗೇಂ
ತಾರೋಂಸೆ ಕರೇಂ ಬಾತೇಂ,
ದುಖಿಯಾ ಆಖೇಂ ಧೂಂಡ್‌ರಹೇಂ
ವಹೀ ಪ್ಯಾರ್ ಕಿ ಧಾತೇಂ

(ನಾನು ನಿದ್ರಾರಹಿತನಾಗಿದ್ದೇನೆ ನಕ್ಷತ್ರಗಳೊಂದಿಗೆ ಮಾತಾಡುತ್ತೇನೆ, ದುಃಖಿತ ಕಣ್ಣುಗಳು ಅದೇ ಪರಿಚಿತ ಪ್ರೇಮವನ್ನು ಅರಸುತ್ತಿವೆ)

ಕ್ರಿಯಾಶೀಲ ಬರಹಗಾರರ ಕೇಂದ್ರವಾಗಿರುವ ಲಾಹೋರ್‌ನಲ್ಲಿ ಡಾ. ವಜೀರ್ ಆಘಾ, ಜಫರ್ ಇಕ್ಬಾಲ್, ಅಮ್ಜದ್ ಇಸ್ಲಾಂ ಅಮ್ಜದ್ ಹಾಗೂ ಅಬ್ಬಾಸರ ಕವನಗಳು ರಾಜಕೀಯ ಉಲ್ಕಾಪಾತಗಳನ್ನು ಹೊಮ್ಮುತ್ತಿವೆ. ಅಬ್ಬಾಸರ ಕವನ "ಯಾಹಾಂ ಹಾರ್ನೇಂ ಬಜ್ನೇ ಕಿ ಇಜ್ಜತ್ ನಹೀಂ" (ಇಲ್ಲಿ ನೀವು ಜೋರಾಗಿ ಶಬ್ದ ಮಾಡಬಾರದು) ತುಂಬಾ ಜನಪ್ರಿಯ. ಆದರೆ ಈ ಕವಿಗಳ ಕಾವ್ಯ ಜನಸಾಮಾನ್ಯರನ್ನು ತಲುಪುತ್ತಿಲ್ಲ. ಭೂಯಿಷ್ಠ ಪದ ಜೋಡಣೆ, ಕ್ಲಿಷ್ಟ ಹೋಲಿಕೆಗಳು ಕಾವ್ಯವನ್ನು ಮಧ್ಯಮವರ್ಗದ ವಿದ್ಯಾವಂತರನ್ನು ಮಾತ್ರ ತಟ್ಟುತ್ತಿದೆ. ಆದ್ದರಿಂದಲೇ ಸರಕಾರ ಸಹಾ ಇವುಗಳನ್ನು ಅಷ್ಟು ಗಂಭೀರವಾಗಿ ಪರಿಗಣಿಸದೆ ಬಿಟ್ಟಿದೆ.

ಜೋಷ್ ಮತ್ತು ಫೈಜ್ ಅಹಮದ್ ಫೈಜ್‌ರಂತಹ ಕವಿಗಳು ಪಾಕಿಸ್ತಾನವನ್ನು ತ್ಯಜಿಸಿದ್ದರೂ ಅವರ ಕವನಗಳು ದೇಶದ ಅನೇಕ ಭಾಗಗಳಲ್ಲಿ ಇಂದೂ ಜನಪ್ರಿಯವಾಗಿ ಉಳಿದಿವೆ. ಇಸ್ಲಾಂಧರ್ಮ ಮತ್ತು ಧರ್ಮಪ್ರಿಯ ದೇಶಭಕ್ತ ಇಕ್ಬಾಲರನ್ನು ಟೀಕಿಸಿದ್ದಕ್ಕಾಗಿ ಜೋಷ್ ದೇಶಾಂತರ ಹೋಗಬೇಕಾಯಿತು. ಫೈಜ್ ಅಹಮದ್ ಫೈಜರ ಜೀವನಕ್ರಮ ಪಾಕಿಸ್ತಾನದಲ್ಲಿ ನಿಷಿದ್ಧವಾದ ರಿಂದ ಅವರೀಗ ಬೈರೂತ್‌ನಲ್ಲಿ ನೆಲೆಸಿದ್ದಾರೆ. ಫೈಜ್‌ರ ಜೀವನಕ್ರಮ ದುಂದುಗಾರಿಕೆಯದೆಂದು ದೂರುವವರು ಸಹಾ ಮೂರು ದಶಕಗಳ ಕಾಲ ಪಾಕಿಸ್ತಾನದಲ್ಲಿ ಅವರ ಸ್ಥಾನ ಅಖಂಡವಾಗಿತ್ತೆಂದು ಒಪ್ಪುತ್ತಾರೆ. ರಾವಲ್ಪಿಂಡಿ ಪಿತೂರಿ ಮೊಕದ್ದಮೆಯಲ್ಲಿ ಜೈಲಿಗೆ ತಳ್ಳಲ್ಪಟ್ಟ ಫೈಜ್‌ರ ಕ್ರಾಂತಿಕಾರಿ ಕಾವ್ಯ ಸೆರೆಮನೆಯ ಕಂಬಿಗಳಿಂದ ಹೀಗೆ ಬಂತು:

ಮತಾಯೀ ಲಹೂ ಕಲಮ್
ಛೀನ್‌ಗಯೀ ತೋ ಕ್ಯಾಗಮ್ ಹೈ
ಕೇ ಖೂನೆ ದಿಲ್ ಮೆಂ ಡುಬಾಲಿ ಹೈ
ಉಂಗಲಿಯಾಂ ಮೈನೆ,
ಲಬೋಂ ಪೆ ಮೊಹರೇಂ
ಲಗೀ ಹೋಂತೋ ಕ್ಯಾ
ಕೆ ರಖದೀ ಹೈ ಹರ್ ಏಕ್ ಹಲ್
ಖಯೇ
ಜುಂಜೀರ್ ಪೆ ಜಬಾಂ ಮೈನೆ.

(ಲೇಖನಿಯನ್ನು ಅವರು ಕಸಿದು
ಕೊಂಡರೇನು?
ಹೃದಯದ ರಕ್ತದಿಂದ ನನ್ನ ಕವನ
ಬರೆಯುವೆ
ನನ್ನ ಬಾಯಿಯನ್ನು ಮೊಹರು ಮಾಡಿ
ಬಂದುಮಾಡಿದರೇನು?
ಸೆರೆಮನೆಯ ಸರಪಳಿಯ ಪ್ರತಿ
ಯೊಂದು
ಅಣು, ಅಣುವೂ ಮಾತನಾಡುತ್ತೆ)

ಫೈಜ್‌ರ ಲೇಖನಿಯ ಹರಿತ ಇನ್ನೂ ಕಡಿಮೆಯಾಗಿಲ್ಲ. ಅವರ ಇತ್ತೀಚಿನ ಕವನ:

ಜಬ್ ತಾಜ್ ಉಛ್‌ಲೇ ಜಾಯೇಂಗೇ
ಜಬ್ ತಖ್ತ್ ಗಿರಾಯೇ ಜಾಯೇಂಗೇ
ಜಬ್ ಅಹ್‌ಲೇ ಸಫಾ ಮರ್‌ದೂದೆ
ಹರಮ್
ಮುಸ್‌ನತ್ ಪೆ ಬಿಠಾಯೇ ಜಾಯೇಂಗೇ

(ಕ್ರಾಂತಿಯಾದಾಗ :
ಕಿರೀಟಗಳು ಹಾರುತ್ತವೆ
ಸಿಂಹಾಸನಗಳು ಉರುಳುತ್ತವೆ
ಅಧಿಕಾರದ ಕುರ್ಚಿಗಳು ಶ್ರೀಸಾಮಾ
ನ್ಯನದಾಗುತ್ತವೆ)

ಕ್ರಾಂತಿಕಾರಿ ಸಾಹಿತ್ಯದಷ್ಟೇ ಸೊಗಸಾಗಿ ಫೈಜ್‌ರ ಪ್ರೇಮಗೀತೆಗಳೂ ಪ್ರಸಿದ್ಧವಾಗಿವೆ. ಅವರ ಪ್ರೇಮಗೀತೆಗಳ ಸೊಗಸನ್ನು ಅರಿಯಲು ಕೆಳಗಿನ ಕವನ ಸಾಕು:

ಗುಲೋಂ ಮೆಂ ರಂಗ್ ಭರೇ
ಬಡೇ ನೌ ಬಹಾರ್ ಚಲೇ,
ಚಲೇ ಭೀ ಅವೋ ಕಿ
ಗುಲ್‌ಶನ್‌ಕ ಕಾರೋಬಾರ್ ಚಲೇ.

ರಾಜಕೀಯ ಬಣ್ಣ ಪಡೆದ ಅವರ ಸ್ವಗತ ಕವನ :

ಹೈ ಉಸ್ ಶೌಖ್ ಕೆ
ಅಹಿಸ್ತಾ ಸೆ ಖುಲ್ತೆ ಹುಮೇ ಹೋಂಠ್,
ಅಪ್ನೆ ಮೌಜೂನ್-ಎ-ಸುಕೂನ್
ಇನ್ ಕೆ ಸಿವಾ ಔರ್ ನಹೀಂ

ಇತ್ತೀಚಿನ ಕವನಗಳಲ್ಲಿ ನಾವು ಹೆಚ್ಚಾಗಿ ಕಾಣುವುದು ರಾಜಕೀಯ ಪ್ರತಿಭಟನೆ. ಇಕ್ಬಾಲ್ ಸಜ್ಜಾದರ ಒಂದು ಪ್ರತಿಭಟನಾತ್ಮಕ ಕಾವ್ಯ ಹೀಗಿದೆ:

ಇಸ್ ಆಮಾಲ್ ನೇತೋ
ಕಹೀಂ ಕಾಭಿ ನ ರಖ್ಖಾ ದೋಸ್ತೋಂ,
ಖುದ್‌ಪರಸ್ತೀ ಕಿ ಹಮೇ ಖ್ವಾಹಿಷ್
ಬಹುತ್ ಮ್ಹಂಗೀ ಪಡಿ.

(ಈ ಪದ್ಧತಿ ನಮಗೆ ದಿಕ್ಕುಗಾಣದಂತೆ ಮಾಡಿದೆ ಇದಕ್ಕಾಗಿ ನಾವು ಕೊಡುವ ಬೆಲೆ ಅಪಾರ)

ಶಕೀಲ್ ಜಲಾಲಿಯವರ ಕವನ ಸಹಾ ಇದೇ ಧಾಟಿಯಲ್ಲಿದೆ.

ರೆಹತೇ ಹೈಂ ಕುಛ್ ಮಲೂಲ್ ಸೆ
ಚೆಹರೇ
ಪಡೋಸ್ ಮೇ,
ಇತ್‌ನಾನಾ ತೇಜ್ ಕೀಜಿಯೇ
ಢೋಲಕ್ ಕೆ ಥಾಪ್ ಕೋ.

(ನೆರೆಮನೆಯಲ್ಲಿ ಉದಾಸೀನ ಮುಖಗಳಿವೆ ಢೋಲಿನ ಸದ್ದನ್ನು ಜೋರು ಮಾಡಬೇಡಿ)

ಹಬೀಬ್ ಜಲೀಲ್‌ರಂತಹ ಕವಿಗಳು ತಮ್ಮ ಕವನಗಳಲ್ಲಿ ನೇರವಾಗಿ ಸರ್ವಾಧಿಕಾರಿ ಜಿಯಾನ ಹೆಸರನ್ನೇ ಉದಾಹರಿಸುತ್ತಾರೆ :

ಜುಲ್ಮತ್ ಕೋ ಜಿಯಾ
ಸರ್‌ಸಾರ್ ಕೋ ಸಬಾ
ಬಂದೇ ಕೋ ಖುದಾ
ಕ್ಯಾ ಲಿಖೇಂ?

(ಕತ್ತಲೆಯನ್ನು ಬೆಳಕು ಚಂಡಮಾರುತವನ್ನು ತಂಗಾಳಿ ಮನುಷ್ಯನನ್ನು ದೇವರು ಎಂದು ನಾನೇಕೆ ಬರೆಯಲಿ?)

ನಿರ್ಭೀತ ಲೇಖನಿಗೆ ಹೆಸರಾದ ಮತ್ತೊಬ್ಬ ಕವಿ ದಿವಂಗತ ಇಬ್ನೆ ಇನ್‌ಷಾ ಅವರ ಕವನದಲ್ಲಿ ಕಾಣುವ ಕೆಳಗಿನ ಚರಣ ಸ್ಮರಣೀಯವಾಗಿದೆ.

ಇನ್‌ಷಾಜಿ ಅಬ್ ಕೋಚ್ ಕರೋ
ಇಸ್‌ಷೆಹರ್ ಮೆಂ ದಿಲ್ ಕ ಲಗನಾ ಕ್ಯಾ,
ವೆಹಷೀ ಕೋ ಸುಕುಂಸೇ ಕ್ಯಾ
ಮತ್‌ಲಬ್
ಜೋಗೀ ಕೆ ನಗರ್ ಮೆಂ ಠಿಕಾನಾ ಕ್ಯಾ.

ಮೂಲತಃ ಉತ್ತರ ಪ್ರದೇಶದ ಸಹಾರನ್‌ಪುರಕ್ಕೆ ಸೇರಿದ ಇಕ್ಬಾಲ್ ಸಜ್ಜಾದ್‌ರ ಈ ಕವನ ಪಾಕಿಸ್ತಾನದಲ್ಲಿರುವ ಮೂಲ ಭಾರತೀಯರ ಮನಸ್ಸಿಗೆ ಹಿಡಿದ ಕನ್ನಡಿಯಾಗಿದೆ.

ಜಹಾಂ ಭೂಭಾಲ್ ಫಸೀಲ್-ಓ-
ದಾರ್
ಮೆಂ ರೆಹತೇ ಹೈಂ,
ಹಮಾರಾ ಹಾಂ ಸಲಾ ದೇಖೋ
ಹಮ್ ಐಸೆ ಘರಮೆಂ ರೆಹತೇ ಹೈಂ
ಲಹೂ ಸೇ ಜೋ ಉಠಾಯೇ ಥೇ
ವೋ ದಿವಾರ್ ನಹೀಂ ಅಪ್ನಿ
ಯುಹೀ ಮೆಹ್‌ಸೂಸ್ ಹೋತಾಹೈ
ಕೆ ಪರಾಯೇ ಘರ್‌ಮೇ ರೆಹತೇ ಹೈಂ.

ಈ ಎಲ್ಲಾ ರಾಜಕೀಯ ಗೊಂದಲಗಳ ನಡುವೆಯೂ ಮಣ್ಣಿನ ಮಕ್ಕಳು ಪ್ರೇಮ, ಪ್ರೀತಿ, ವಿರಹಗಳ ಬಗ್ಗೆ

(7ನೇ ಪುಟ ನೋಡಿ)

(ಆಧಾರ)
ಮು. ಇಕ್ಬಾಲ್ ಹುಸೇನ್

ರಾಜೇಶ್ವರರಾವ್‌ರ ಗಡಿಬಿಡಿ

ಎಂ. ಬಸವಪುನ್ನಯ್ಯ

ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನಕಾರ್ಯದರ್ಶಿ ಸಿ. ರಾಜೇಶ್ವರರಾವ್ ಅವರು ನನ್ನ ಲೇಖನಕ್ಕೊಂದು ಮಾರುತ್ತರ ಬರೆದಿದ್ದಾರೆ. ಅದರಲ್ಲಿ, ಇ.ಎಂ.ಎಸ್. ನಂಬೂದಿರಿಪಾದರ ಭಾಷಣದ ವಿರುದ್ಧ ಅವರು ಮಾಡಿರುವ ಆರೋಪಗಳಿಗೆ ತಮ್ಮ ಪಕ್ಷದ ಸಮರ್ಥನೆಯನ್ನೂ ಒದಗಿಸಿದ್ದಾರೆ. ಇ.ಎಂ.ಎಸ್. ಮಾಡಿರುವ ಟೀಕೆಯ ವಿರುದ್ಧ ತಮ್ಮ ಪಕ್ಷ ಮತ್ತು ಅದರ ರಾಜಕೀಯ-ಸೈದ್ಧಾಂತಿಕ ನೀತಿಯನ್ನು ಸಮರ್ಥಿಸಿಕೊಳ್ಳುವುದಕ್ಕೇ ಅವರು ನಿಂತಿಲ್ಲ. ಬದಲು ಸಿ.ಪಿ.ಐ.(ಎಂ) ವಿರುದ್ಧ ದ್ವೇಷಕಾರಿ, "ಐಕ್ಯ ಕಮ್ಯೂನಿಸ್ಟ್ ಪಕ್ಷದಲ್ಲಿ ಒಂದು ಅಲ್ಪಸಂಖ್ಯಾತ ಪ್ರತ್ಯೇಕತಾವಾದಿ ಪ್ರವೃತ್ತಿ ಇದ್ದು, ಅದು 1964ರಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವನ್ನು ಸ್ಥಾಪಿಸಿತು" ಎಂದು ಹೇಳಿದ್ದಾರೆ. ಸಿ.ಪಿ.ಐ.(ಎಂ) ಒಂದು ಎಡ ಪ್ರತ್ಯೇಕತಾವಾದಿ ಗುಂಪು. ಆದರೆ ಸಿ.ಪಿ.ಐ. ನಿಜವಾದ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷ ಎಂದು ಹೇಳಿದಂತೆ ಇದು. ಸಿ.ಪಿ.ಐ.(ಎಂ) ವಿರುದ್ಧ ರಾಜೇಶ್ವರರಾವ್ ಮಾಡಿರುವ ಟೀಕೆಯು ಅಸತ್ಯ ಎಂಬುದನ್ನು ಕಟು ನುಡಿಗಳಲ್ಲಿ ನಾವು ಉತ್ತರಿಸಿದ್ದೆವು. ಆಳುವ ಕಾಂಗ್ರೆಸ್ ಪಕ್ಷ ಮತ್ತು 1975-77ರಲ್ಲಿ ಅದರ ತುರ್ತುಪರಿಸ್ಥಿತಿಯನ್ನು ಬೆಂಬಲಿಸಿದ ಅವರ ಪಕ್ಷದ ಸ್ವವಿಮರ್ಶೆಯು, ಸ್ವಸಮರ್ಥನೆಗೆ ಹೇಳಿದ್ದು ಮತ್ತು ಆಳುವ ಕಾಂಗ್ರೆಸ್ ಪಕ್ಷಕ್ಕೆ ಅವರ ಪಕ್ಷವು ನೀಡುವ ಸಹಕಾರ ಮತ್ತು ಮೈತ್ರಿಯು, ಭಾರತದ ಪ್ರಭುತ್ವ ಮತ್ತು ಸರ್ಕಾರಗಳ ಬಲ ಸುಧಾರಣಾವಾದಿ ಮತ್ತು ಪರಿಷ್ಕರಣವಾದಿ ವಿಮರ್ಶೆಯ ವರ್ಗಸ್ವರೂಪದಿಂದ ಹುಟ್ಟಿದ್ದು ಎಂಬುದನ್ನೂ ಹೇಳಿದ್ದೆವು.

ಸಹಜವಾಗಿ ರಾಜೇಶ್ವರರಾಯರಿಗೆ ನಮ್ಮ ಟೀಕೆಯು ಸಹಿಸಲಿಲ್ಲ. ನಾವು ಮಾಡಿದ ಕೆಲವು ಟೀಕೆಗಳ ಮೇಲೆ ಅವರು ದಡಬಡ ಎಂದು ಕೂಗಾಡಿ, "ಸ್ನೇಹಪೂರ್ವಕ ಪಕ್ಷದೊಡನೆ ಸೌಹಾರ್ದರೀತಿಯಲ್ಲಿ ರಾಜಕೀಯ ಸಂಭಾಷಣೆ ನಡೆಸುವುದಕ್ಕೂ ಬಸವಪುನ್ನಯ್ಯ ಸಮರ್ಥರಲ್ಲ ಎಂಬುದನ್ನು ಇದು ತೋರಿಸುತ್ತದೆ" ಎಂದು ಬರೆದರು. ರಾಜಕೀಯ ಸಂಭಾಷಣೆ ನಡೆಸುವುದಕ್ಕೆ ನಾವು ಸಮರ್ಥರೋ ಅಲ್ಲವೋ ಮತ್ತು ಸಿ.ಪಿ.ಐ. ಮತ್ತು ಅದರ ನಾಯಕರು ನಮಗೆ ಈ ವಿಚಾರವನ್ನು ಹೇಳಿಕೊಡಬೇಕೋ ಹೇಗೆ ಎನ್ನುವುದು ಬೇರೆ ಪ್ರಶ್ನೆ. ಆದರೆ ರಾಜೇಶ್ವರರಾಯರು ಗಾಸಿಗೊಂಡ ಮುಗ್ಧತೆಯನ್ನು ನಟಿಸಿ, ಸಿ.ಪಿ.ಐ.(ಎಂ) ಮೇಲೆ ಅವರು ನಡೆಸಿದ ದಾಳಿಯು, ಸ್ನೇಹಪೂರ್ವಕ ಪಕ್ಷದೊಡನೆ ಸೌಹಾರ್ದ ರೀತಿಯಲ್ಲಿ ನಡೆದ ಒಂದು ಸಪ್ಪೆ ರಾಜಕೀಯ ಸಂಭಾಷಣೆ ಎಂದು ಮುಚ್ಚಿಹಾಕಬಾರದು.

ಸ್ನೇಹಪೂರ್ವಕ ಮತ್ತು ಸೌಹಾರ್ದಯುತ

ಐಕ್ಯ ಸಿ.ಪಿ.ಐ.ನಲ್ಲಿದ್ದ ಕಟು ಪ್ರತ್ಯೇಕತಾವಾದಿ ಗುಂಪಿನ ಫಲವೇ ಸಿ.ಪಿ.ಐ.(ಎಂ) ಎಂದು ಹೇಳುವುದು ಸ್ನೇಹಪೂರ್ವಕ ಪಕ್ಷಕ್ಕೆ ಸೌಹಾರ್ದತಾ ಹೇಳಿಕೆಯೇ ಎಂಬ ಪ್ರಶ್ನೆಯನ್ನು ನಾವು ಅವರಿಗೆ ಮತ್ತು ಜಗತ್ತಿಗೆ ಕೇಳುತ್ತೇವೆ. ಅಂಥ ಹೇಳಿಕೆಗಳು ಸ್ನೇಹ ಅಥವಾ ಸೌಹಾರ್ದತೆ ಏನೂ ಇಲ್ಲ. 1963-64ರ ವರ್ಷಗಳಲ್ಲಿ ಆದ ಬಿರುಕು ಮತ್ತು ಅದರ ಹಿನ್ನೆಲೆಯಲ್ಲಿದ್ದ ರಾಜಕೀಯ ಸೈದ್ಧಾಂತಿಕ ವಿವಾದಗಳ ಕಟುನುಡಿಗಳು ಮಾತ್ರ ಆಗಿವೆ. ಇತ್ತೀಚಿನ ಒಂದು ವರ್ಷದಲ್ಲಿ ಎರಡು ಪಕ್ಷಗಳ ನಡುವೆ ಬೆಳೆದಿರುವ "ಸ್ನೇಹಪೂರ್ವಕ ಮತ್ತು ಸೌಹಾರ್ದ" ಸಂಬಂಧಗಳನ್ನು, ಎರಡೂ ಪಕ್ಷಗಳು ರಾಜಕೀಯ-ಸೈದ್ಧಾಂತಿಕ ಯುದ್ಧವನ್ನು ಉಗ್ರವಾಗಿ ಹೋರಾಡುತ್ತಿದ್ದಾಗಿನ ದಿನಗಳಿಗೆ ಅನ್ವಯಿಸಲಾಗುವುದಿಲ್ಲ.

ಸಿ.ಪಿ.ಐ. ಪಕ್ಷವು ಪ್ರತಿಗಾಮಿತನ ಮತ್ತು ಪ್ರತಿಕ್ರಾಂತಿಯ ಶಕ್ತಿಗಳೊಂದಿಗೆ ಸೇರಿ, ಸಿ.ಪಿ.ಐ.(ಎಂ) ಪಕ್ಷವನ್ನು ಮಾರ್ಕ್ಸ್‌ವಾದಿವಿರೋಧಿ, ಕಮ್ಯೂನಿಸ್ಟ್ ವಿರೋಧಿ ಮತ್ತು ಎಡ ಪ್ರತ್ಯೇಕತಾವಾದಿ ಗುಂಪು ಎಂದು ಖಂಡಿಸಲು ಏನೇನು ಮಾಡಬೇಕೋ ಅದನ್ನೆಲ್ಲ ಮಾಡಿತು. ಸಿ.ಪಿ.ಐ.(ಎಂ) ಪಕ್ಷವು ಸಿ.ಪಿ.ಐ. ಪಕ್ಷವನ್ನು ಬಲ ಪರಿಷ್ಕರಣವಾದಿ ಗುಂಪು, ಬೂರ್ಜ್ವಾ-ಭೂಮಾಲೀಕ ಕಾಂಗ್ರೆಸ್ ಪಕ್ಷ ಮತ್ತು ಅದರ ಸರ್ಕಾರದ ಜೊತೆ ಸಹಕರಿಸಿ ಮೈತ್ರಿ ಬೆಳೆಸುತ್ತಿದೆ ಎಂದು ಖಂಡಿಸಿತು. ಇವೆಲ್ಲವೂ ಈಗ ದಾಖಲಾದ ಚರಿತ್ರೆ.

ನಡೆದದ್ದರ ಸ್ಮರಣೆ

ಸಿ.ಪಿ.ಐ.(ಎಂ) ಪಕ್ಷವನ್ನು ಅವರು ಹೇಗೆ ಪರಿಗಣಿಸಿದ್ದಾರೆಂಬುದನ್ನು ರಾಜೇಶ್ವರರಾಯರಿಗೆ ನೆನಪಿಸುವುದು ಒಳ್ಳೆಯದು. 1975ರ ಆಗಸ್ಟ್‌ನಲ್ಲಿ ಅವರ ಪಕ್ಷದ ವಾರಪತ್ರಿಕೆ ನ್ಯೂ ಏಜ್‌ನಲ್ಲಿ "ಲೆಫ್ಟ್ ಅಪರ್ಚುನಿಸಂ ಇನ್ ದಿ ಸರ್ವಿಸ್ ಆಫ್ ಕೌಂಟರ್ ರೆವಲ್ಯೂಷನ್" ಎಂಬ ಲೇಖನದಲ್ಲಿ ಅವರು ಸಿ.ಪಿ.ಐ.(ಎಂ) ಪಕ್ಷವನ್ನು ಖಂಡಿಸಿದ್ದಾರೆ. "ಅವರ ಎಡ ಅವಕಾಶವಾದಿ ನೀತಿಗಳ ತರ್ಕವು ಅಂತಿಮವಾಗಿ ಸಿ.ಪಿ.ಐ.(ಎಂ) ಅನ್ನು ಪ್ರತಿಕ್ರಾಂತಿಯ ಶಿಬಿರದಲ್ಲಿ ನಿಲ್ಲಿಸಿತು". ತಮ್ಮ ಪಕ್ಷದ ದಿವಾಳಿ ರಾಜಕೀಯ-ಸೈದ್ಧಾಂತಿಕ ನೀತಿಯನ್ನು ಸಮರ್ಥಿಸಿಕೊಳ್ಳುತ್ತ ಅವರು "ಸಿ.ಪಿ.ಐ.(ಎಂ) ತೆಗೆದುಕೊಂಡ ಸೈದ್ಧಾಂತಿಕ, ಕಾರ್ಯಕ್ರಮಾತ್ಮಕ, ರಾಜಕೀಯ ಮತ್ತು ಪ್ರಸ್ತುತ ನಿಲುವುಗಳು ತಪ್ಪು ಎಂಬುದನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬೆಳವಣಿಗೆಗಳು ತೋರಿಸಿಕೊಟ್ಟಿವೆ. ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಪ್ರಮುಖ ಅಂಗವಾದ ಭಾರತ ಕಮ್ಯೂನಿಸ್ಟ್ ಪಕ್ಷದ ನಿಲುವುಗಳು ಸರಿಯಾಗಿವೆ ಎಂಬುದು ರುಜುವಾತಾಗಿದೆ" ಎಂದು ಬರೆದಿದ್ದಾರೆ.

"ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯಿಂದ ಅವರು ಸಂಪೂರ್ಣವಾಗಿ ಹೊರಗಿದ್ದಾರೆ. ಭಹುತೇಕ ಎಲ್ಲ ಸಮಾಜವಾದಿ ದೇಶಗಳಿಂದಲೂ ಅವರು ದೂರವಾಗಿದ್ದಾರೆ. ಕೆಲ ಸಮಯದಲ್ಲಿ ಅವರು ತಮ್ಮ ಪಕ್ಷದೊಂದಿಗೆ ಕ್ಯೂಬ, ವಿಯೆಟ್ನಾಂ ಮುಂತಾದುವು ಸಂಬಂಧಹೊಂದಿದೆಯೆಂದು ಪ್ರದರ್ಶಿಸಿಕೊಂಡರು. ಈಗ ಅವರು ಅದನ್ನು ಮಾಡುವಂತಿಲ್ಲ" ಎಂದು ಕ್ಷುದ್ರ ತೀರ್ಮಾನಗಳಿಗೆ ಬಂದರು.

ಸಿ.ಪಿ.ಐ.(ಎಂ) ಪಕ್ಷದ ಬಗ್ಗೆ ಮತ್ತು ರಾಷ್ಟ್ರೀಯ, ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯಲ್ಲಿ ಅದರ ಪಾತ್ರ ಮತ್ತು ಸ್ಥಾನದ ಬಗ್ಗೆ ಸಿ.ಪಿ.ಐ. ಮತ್ತು ಅದರ ಕಾರ್ಯದರ್ಶಿ ರಾಜೇಶ್ವರರಾವ್ ಮಾಡಿರುವ ತೀರ್ಮಾನ ಇಂಥದು! ಅಂಥ ಹೇಳಿಕೆಗಳನ್ನು "ಬಡಾಯಿ" ಎಂದು ವರ್ಣಿಸಬಹುದು. ಆದರೆ ಹೀಗೆ ಅಂದರೆ ರಾಜೇಶ್ವರರಾವ್ ಕೋಪಗೊಂಡು, "ಸ್ನೇಹಪೂರ್ವಕವಾಗಿರುವ ಪಕ್ಷದ ಜೊತೆ ಸೌಹಾರ್ದಯುತವಾಗಿ ರಾಜಕೀಯ ಸಂಭಾಷಣೆ ನಡೆಸಲು ಬಸವಪುನ್ನಯ್ಯ ಅಸಮರ್ಥರು" ಎಂದು ದೂರಬಹುದು.

ಇವೆಲ್ಲವೂ ಆರು ವರ್ಷಗಳ ಹಿಂದೆ ನಡೆದಿರುವುದೆಂದು ರಾವ್ ಹೇಳಬಹುದು. ಸಿ.ಪಿ.ಐ.(ಎಂ) ಬಗ್ಗೆ ಮಾಡಿದ "ತೀರ್ಮಾನಗಳ"ನ್ನು ಅವರು ಅಥವಾ ಅವರ ಪಕ್ಷ ಪರಿಷ್ಕರಿಸಿದ್ದಾರೆಯೇ ಅಥವಾ ತಿದ್ದುಪಡಿ ಮಾಡಿದ್ದಾರೆಯೇ ಎಂದು ನಾವು ಕೇಳಬೇಕು. ಅಂಥ ಮರುವಿಮರ್ಶೆ ಅಥವಾ ಪರಿಷ್ಕರಣ ನಡೆದಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಅದಕ್ಕೆ ವಿರುದ್ಧವಾಗಿ, ರಾಜೇಶ್ವರರಾವ್ ದೊಡ್ಡ ದನಿಯಲ್ಲಿ ಹೀಗೆ ಬರೆಯುತ್ತಾರೆ; "ಸತ್ಯವನ್ನು ವಿಕೃತಗೊಳಿಸಿದಾಗ ಮತ್ತು ಸಿ.ಪಿ.ಎಸ್.ಯು. ಮತ್ತು ನಮ್ಮ ಪಕ್ಷದ ಮೇಲೆ ಗಂಭೀರ ಆರೋಪಗಳನ್ನು ಹೊರಿಸಿದಾಗ ನಾವು ಸುಮ್ಮನಿರಬೇಕೆಂದು ಯಾರೂ ನಿರೀಕ್ಷಿಸುವುದಿಲ್ಲ. ನಾವು ಮಾಡಿರುವ ಕೆಲಸ, ದಾಖಲೆಯನ್ನು ನೇರಗೊಳಿಸಿರುವುದಷ್ಟೇ".

ಏಕೈಕ ಏಜೆಂಟರು

ಆದ್ದರಿಂದ, ರಾಜೇಶ್ವರರಾವ್ ಮತ್ತು ಅವರ ಪಕ್ಷವು, ಅಂತರರಾಷ್ಟ್ರೀಯ ಸಮತಾವಾದದ ಭಾರತದ ಏಕೈಕ ಏಜೆಂಟರು! ಸಿ.ಪಿ.ಐ.(ಎಂ) ಮತ್ತು ಅದರ ಪ್ರಧಾನಕಾರ್ಯದರ್ಶಿ ಇ.ಎಂ.ಎಸ್. ಮಾಡಿದ "ದೂಷಣೆ"ಗಳ ವಿರುದ್ಧ ಸಿ.ಪಿ.ಎಸ್.ಯು.ವನ್ನು ಸಮರ್ಥಿಸಲು ಅವರು ಮತ್ತು ಅವರ ಪಕ್ಷವೇ ಖ್ಯಾತಿವೆತ್ತ ಪ್ರತಿನಿಧಿಗಳು. "ಸತ್ಯವು ವಿಕೃತಗೊಂಡಾಗ" ಅವರು ಮತ್ತು ಅವರ ಪಕ್ಷವು ಸುಮ್ಮನಿರುವಂತಿಲ್ಲ, ಅವರು "ಸತ್ಯ"ವನ್ನು ಸ್ಥಾಪಿಸುತ್ತಾರೆ ಮತ್ತು "ದಾಖಲೆಯನ್ನು ನೇರಗೊಳಿಸು"ತ್ತಾರೆ. ವಿಶ್ವ ಸಮತಾವಾದದ ರಕ್ಷಣೆಗೆ ಅದರಲ್ಲೂ ಸಿ.ಪಿ.ಐ.(ಎಂ) ಮಾಡಿದ "ಗಂಭೀರ ಆರೋಪ"ಗಳ ವಿರುದ್ಧ, ಸಿ.ಪಿ.ಐ. ನಾಯಕತ್ವ ನೀಡುವ "ಅತಿಪವಿತ್ರ" ಪೋಜು ತುಂಬ ತಮಾಷೆಯಾಗಿದೆ.

"ರಾವ್ಸ್ ಬ್ರಾಡ್‌ಸೈಡ್ಸ್ ಅಗೈನ್‌ಸ್ಟ್ ದಿ ಸಿ.ಪಿ.ಐ.(ಎಂ)" ಎಂಬ ನಮ್ಮ ಮೊದಲಿನ ಲೇಖನದಲ್ಲಿ ಈ ರೀತಿ ಹೇಳಿದ್ದೇವೆಂಬುದನ್ನು ಈ ಸಂಬಂಧದಲ್ಲಿ ಸಿ.ಪಿ.ಐ. ನಾಯಕರಿಗೆ ನಾವು ನೆನಪಿಸುತ್ತೇವೆ: ರಾಜೇಶ್ವರರಾಯರು, "ಸಿ.ಪಿ.ಐ.(ಎಂ) ಪಕ್ಷವು ಮೂಲಭೂತವಾಗಿ ಸೋವಿಯತ್ ವಿರೋಧಿ ಮತ್ತು ಸಿ.ಪಿ.ಎಸ್.ಯು. ವಿರೋಧಿ ಮತ್ತು ಸಿ.ಪಿ.ಸಿ. ಮತ್ತು ಪಿ.ಆರ್.ಸಿ. ಪರ ಎಂದು ಚಿತ್ರಿಸಲು ಪ್ರಯತ್ನಿಸುತ್ತಿದ್ದಾರೆ. ಇಂಥ ಪ್ರಯತ್ನಗಳು ಸಾಧುವೂ ಅಲ್ಲ ಫಲಕಾರಿಯೂ ಅಲ್ಲ" ನಾವು ಇನ್ನಷ್ಟು ಹೇಳಿದ್ದೆವು: "ನಮ್ಮ ಸೈದ್ಧಾಂತಿಕ ಮತ್ತು ರಾಜಕೀಯ ವಿಮರ್ಶೆಗಳು ದಾಖಲೆಯಲ್ಲಿವೆ ಮತ್ತು ಈ ಸದ್ಯದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬೆಳವಣಿಗೆಯ ಹಂತದಲ್ಲಿ ನಾವು ಮತ್ತೆ ಅದರ ಬಗ್ಗೆ ಚರ್ಚೆಗೆ ಎಳೆಯಲ್ಪಡಲು ಇಚ್ಛಿಸುವುದಿಲ್ಲ. ರಾಜೇಶ್ವರರಾವ್ ಎಷ್ಟೇ ಪ್ರಯತ್ನಿಸಿದರೂ ಬೇಡ".

ಆದರೂ, ನಮ್ಮನ್ನು ಚರ್ಚೆಗೆ ಎಳೆಯಲು ರಾಜೇಶ್ವರರಾವ್ ಮತ್ತು ಅವರ ಪಕ್ಷ ನಿರ್ಧರಿಸಿಬಿಟ್ಟಿದ್ದರೆ ಮತ್ತು ಅದಕ್ಕೆ ಸೇರಲು ನಮ್ಮ ಹಿಂಜರಿಕೆಯನ್ನು ಮೆಚ್ಚಲು ಒಪ್ಪದಿದ್ದರೆ, ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ "ಏಕೈಕ ವಿತರಣಾ ಹಕ್ಕುಗಳು" ತಮಗಿವೆಯೆಂದು ಅವರು ಸಾರುತ್ತಾ ಹೋದರೆ, ನಮಗೆ ನಮ್ಮ ಪಕ್ಷ ಮತ್ತು ಅದರ ರಾಜಕೀಯ-ಸೈದ್ಧಾಂತಿಕ ನಿಲುವನ್ನು ಸಮರ್ಥಿಸಿಕೊಳ್ಳದೆ ಬೇರೆ ದಾರಿಯೇ ಇಲ್ಲ.

ಪ್ರತ್ಯೇಕತೆ

ವಿಶ್ವಸಮತಾವಾದಿ ಚಳುವಳಿಯಿಂದ ಸಿ.ಪಿ.ಐ.(ಎಂ) ದೂರ ಸರಿದಿರುವ ಸಿದ್ಧಾಂತಕ್ಕೆ ಬರುವುದಾದರೆ, ನಾವು ಸ್ವಲ್ಪ ದೂರ ಉಳಿದಿದ್ದೇವೆ ಎಂಬುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಬೇರೆದ ಕಣ್ಣುಗಳಿಂದ ಈ ನಿರ್ಧಾರಕ್ಕೆ ಬಂದಿದ್ದೇವೆ. ಅಂಥ ಕೆಲವು ಘಟನೆಗಳನ್ನು ರಾಜೇಶ್ವರರಾಯರಿಗೆ ನೆನಪಿಸಬೇಕೆ? ಸಿ.ಪಿ.ಐ. ಬೆಂಬಲಿಸಿದ ನಂತರ "ಒಂದು ಗಂಭೀರ ತಪ್ಪು" ಎಂದು ಸ್ವವಿಮರ್ಶೆ ಮಾಡಿಕೊಂಡ ಜೂನ್ 26, 1975ರ ರಾಷ್ಟ್ರೀಯ ತುರ್ತು ಪರಿಸ್ಥಿತಿಯಿಂದ ಆರಂಭಿಸೋಣ.

ತುರ್ತುಪರಿಸ್ಥಿತಿಯನ್ನು ಪ್ರಶಂಸಿಸುವ ವರದಿಗಳ ಸರಣಿಯು "ನ್ಯೂ ಏಜ್"ನ 1955ರ ಜುಲೈ 13ರ ಸಂಚಿಕೆಯಿಂದ ಆರಂಭವಾಯಿತು. ಅದರ ಬ್ಯಾನರ್ ಹೆಡ್ ಲೈನ್‌ಗಳು "ಸ್ಟ್ಯಾಂಚ್ ಸಪೋರ್ಟ್ ಫ್ರಮ್ ಸೋವಿಯೆಟ್ ಯೂನಿಯನ್" ಮತ್ತು "ಪೀಸ್ ಫೋರ್ಸಸ್ ಹೈಲ್ ಬ್ಲೋ ಟು ರಿಯಾಕ್ಷನ್" ಎಂದಿತ್ತು. ಇದರಲ್ಲಿ ಎರಡನೆಯದು, ವಿಶ್ವಶಾಂತಿ ಸಮಿತಿ ಮತ್ತು ಅದರ ಪ್ರಧಾನಕಾರ್ಯದರ್ಶಿಯವರ ವರದಿಯಾಗಿದ್ದು, ತುರ್ತುಪರಿಸ್ಥಿತಿಯನ್ನು ಎಲ್ಲ ಖಂಡಗಳ 125 ದೇಶಗಳು ಹೊಗಳಿದವು ಎಂದಿತ್ತು. ಹೀಗೇ ವಿಶ್ವದ, ಚಿಲಿಯ, ಶ್ರೀಲಂಕದ, ಆಫ್ರೋ-ಏಷ್ಯನ್ ಜನಾಂಗದ, ಪೋಲೆಂಡ್ ಕಾರ್ಮಿಕರ ಪಕ್ಷದ ಹೊಗಳಿಕೆಗಳು ಇದಕ್ಕಿವೆ ಎಂಬ ಶೀರ್ಷಿಕೆಗಳು ನಂತರ ಬಂದವು.

ಜುಲೈ 20, 1975ರ "ನ್ಯೂ ಏಜ್"ನಲ್ಲಿ ಪ್ರಾವ್ದಾ, ಡಬ್ಲ್ಯು.ಎಫ್.ಟಿ.ಯು. ಜಗತ್ತಿನ ಮಹಿಳೆಯರು ಮುಂತಾದವರು ತುರ್ತುಪರಿಸ್ಥಿತಿಯನ್ನು ಬೆಂಬಲಿಸಿದ್ದಾರೆಂಬ ಶೀರ್ಷಿಕೆಗಳು ಬಂದವು.

ಪಾಟ್ನಾದಲ್ಲಿ 1975ರ ಡಿಸೆಂಬರ್ 4-7ರವರೆಗೆ ನಡೆದ ವಿಶ್ವ ಫ್ಯಾಸಿಸ್ಟ್ ವಿರೋಧಿ ಸಭೆಗೆ ಆರು ತಿಂಗಳುಗಳ ಪ್ರಯಾಸಕರ ಸಿದ್ಧತೆಗಳ ನಂತರ, ಡಿಸೆಂಬರ್ ಏಳರ "ನ್ಯೂ ಏಜ್" ಹೆಮ್ಮೆಯಿಂದ ಸಾರಿತು: ಫ್ಯಾಸಿಸ್ಟ್ ವಿರೋಧಿ ಹೋರಾಟಗಾರರ ವಿಶ್ವಸಭೆಯು ಗುರುವಾರ ಮಧ್ಯಾಹ್ನ ಇಲ್ಲಿ ಆರಂಭವಾಯಿತು. 6,000 ಪ್ರತಿನಿಧಿಗಳಿದ್ದು, ಇದರಲ್ಲಿ 100ಮಂದಿ ವಿದೇಶಿ ಪ್ರತಿನಿಧಿಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಪ್ರತಿನಿಧಿಗಳು ಇದ್ದಾರೆ. "ನ್ಯೂ ಏಜ್"ನ ಮುಂದಿನ ವಾರದ ಸಂಚಿಕೆಯಲ್ಲಿ ಪ್ರತಿನಿಧಿಗಳ ಸಂಖ್ಯೆ 6,800 ಆಗಿತ್ತು. ಇದರಲ್ಲಿ 114 ವಿದೇಶಿ ಪ್ರತಿನಿಧಿಗಳಿದ್ದರು. ಈ ಸಭೆಯು ಹೇಳಿದ್ದು ಏನು? "ಪ್ರಧಾನ ಮಂತ್ರಿಯು ತುರ್ತುಪರಿಸ್ಥಿತಿಯನ್ನು ಜಾರಿಮಾಡಿರುವುದರಿಂದ ಮತ್ತು ಬಲ ಮತ್ತು ಫ್ಯಾಸಿಸ್ಟ್ ಶಕ್ತಿಗಳ ಮೇಲೆ ಅವರು ಸಮಯೋಚಿತ ದೃಢಕ್ರಮಗಳನ್ನು ತೆಗೆದುಕೊಂಡಿರುವುದರಿಂದ ಭಾರತವು ದೊಡ್ಡ ದುರಂತದಿಂದ ಪಾರಾಯಿತು".

(5ನೇ ಪುಟ ನೋಡಿ)

ಪುಸ್ತಕ ವಿಮರ್ಶೆ :

ಗುಡಿಹಳ್ಳಿ ನಾಗರಾಜ

ಮಾನವ ಜನಾಂಗದ ಪ್ರಥಮ ಬಂಡಾಯ ದಾಖಲೆಗೊಳಿಸುವ "ಮೃತ್ಯುಂಜಯ"

[ಲೇಖಕ : ನಿರಂಜನ; ಪುಟ 484; ಪ್ರಕಟನೆ : ನವಕರ್ನಾಟಕ; ಬೆಲೆ : 15ರೂ.]

ಮಾನವ ಜನಾಂಗದ ಬೆಳವಣಿಗೆಯ ಹಂತದಲ್ಲಿ ನಾಗರೀಕತೆಯು ಉದಯವಾದದ್ದು ನದಿ ದಂಡೆಗಳಲ್ಲಿ. ಇದರಲ್ಲಿ ನೈಲ್‌ನದಿಯ ಪಕ್ಕದ ಈಜಿಪ್ಟ್ (ಪ್ರಾಚೀನ ಐಗುಪ್ತ) ಕೂಡ ಒಂದು. ಈ ಜನತೆಯ ಜೀವನ ಪ್ರವಾಹದ ಒಂದು ಸಾವಿರ ವರ್ಷಗಳ ನಂತರ ಪ್ರಥಮ ಬಂಡಾಯವೊಂದು ಜರುಗಿತು. ಪ್ರಪ್ರಥಮವಾಗಿ ಗುಲಾಮರಾಗಿದ್ದ ಜನ ಅಧಿಕಾರ ವಶಪಡಿಸಿಕೊಂಡರು. ಈ ಪ್ರದೇಶದ ಬೆಳವಣಿಗೆಯ ಇತಿಹಾಸದಲ್ಲಿ ಬರುವ ಪ್ರಥಮ ಬಂಡಾಯವನ್ನು ದಾಖಲೆಗೊಳಿಸುವ ಮಹತ್ತರ ಕೃತಿ ನಿರಂಜನರ 'ಮೃತ್ಯುಂಜಯ'. ಕನ್ನಡ ಸಾಹಿತ್ಯದಲ್ಲಿ ಈ ಅಪೂರ್ವ ಸಂಗತಿ ದಾಖಲೆಯಾಗಿದೆ ಎನ್ನುವುದು ಕನ್ನಡಿಗರೆಲ್ಲರು ಹೆಮ್ಮೆಪಟ್ಟುಕೊಳ್ಳಬೇಕಾದ ವಿಚಾರ.

ಸಾವಿರಾರು ವರ್ಷಗಳಿಂದ ಫೆರೋ (ರಾಜ)ನ, ಅರ್ಚಕರ, ಭೂಮಾಲೀಕರ ದಬ್ಬಾಳಿಕೆಗೊಳಗಾಗಿದ್ದ ಜನ ಆಳುವವರ ದರ್ಪ ಲಜ್ಜೆಗೆಟ್ಟಾಗ ದಂಗೆಯೆದ್ದು ಒಂದು ಪ್ರಾಂತವನ್ನು ವಶಪಡಿಸಿಕೊಳ್ಳುತ್ತಾರೆ. ಈ ಜನ ರಾಳ್ವಿಕೆಯಲ್ಲಿ ಸಂಯಮ ನಡವಳಿಕೆಯುಳ್ಳವನಾದ ದೃಢವಾದ ಆಳವಾದ ವ್ಯಕ್ತಿಯನ್ನು (ಮೆನೆಪ್‌ಟಾ) ತಮ್ಮ ನಾಯಕನನ್ನಾಗಿ ಆರಿಸುತ್ತಾರೆ. ಇವರ ಆಳ್ವಿಕೆಯಲ್ಲಿ ಯಾರೂ ದಾಸರಿಲ್ಲ, ದಾಸಿಯರಿಲ್ಲ. ಎಲ್ಲರೂ ಮುಕ್ತರು. ದುಡಿಮೆಯಿಂದ ವಸ್ತುಗಳ ಸೃಷ್ಟಿಯಾಗುವ ಅನ್ಯೋನ್ಯ ತಿಳುವಳಿಕೆಯಿಂದ ಸುಲಿಗೆಯ ಒಂದೊಂದೇ ಕವಚ ಕಳಚುತ್ತಾ ಬರುತ್ತಾರೆ. ಇವರ ಆದರ್ಶ ಪ್ರಾಚೀನ ನೈತಿಕ ಮೌಲ್ಯಗಳನ್ನು ಒಪ್ಪಿಕೊಂಡುದುದಾಗಿದೆ. ಕೆಲವೇ ದಿನ ಆದರ್ಶ ಆಡಳಿತ ನಡೆಸಿದ ಜನ, ಸಾವಿರಾರು ವರ್ಷಗಳಿಂದ ಸುಲಿಯುತ್ತ ಬಂದ ಫೆರೋ, ಅರ್ಚಕ, ಭೂಮಾಲೀಕ ಪ್ರಭುತ್ವದ ವ್ಯವಸ್ಥಿತ ಸಂಚಿನ ಮುಂದೆ ಉಪಾಯಗಾಣದವರಾಗುತ್ತಾರೆ. ಸರಳವಾದ, ನೇರವಾದ ಈ ಜನರ ಆಳ್ವಿಕೆ ಆಳುವ ವರ್ಗದ ಕುಟಿಲೋಪಾಯಗಳ ವಿರುದ್ಧ ಬೋಳೇಯಾಗಿ ಕಾಣುತ್ತದೆ. ಇವರ ನಾಯಕ ಶತ್ರುಗಳ ಸೆರೆಮನೆಯಿಂದ ತಪ್ಪಿಸಿಕೊಳ್ಳುವ (ಶೋಷಿತರ, ದಲಿತರ ಒಳಿತಿಗಾಗಿ) ಅವಕಾಶ ಬಂದರೂ ಕೂಡ ಯಾವುದೋ ಅರ್ಥವಿಲ್ಲದ ಆದರ್ಶಕ್ಕೆ ಕಟ್ಟುಬಿದ್ದು ಬೋಳೇಯಾಗಿ ನಡೆದುಕೊಳ್ಳುತ್ತಾನೆ ಎನಿಸುತ್ತದೆ. ಆದರೆ ಆಗಿನ ಐತಿಹಾಸಿಕ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ಈ ಸಂಗತಿಗಳನ್ನು ವಿಶ್ಲೇಷಿಸುವುದು ಒಳ್ಳೆಯದು. ಆ ಕಾಲಘಟ್ಟದಲ್ಲಿ ಇದಕ್ಕಿಂತ ಹೆಚ್ಚಾಗಿ ನಿರೀಕ್ಷಿಸಲು ಸಾಧ್ಯವಿಲ್ಲವೇನೋ!

"ಜೀವತೇದು ದುಡಿಯುವ ಜನರಿಗೆ ಅರೆಹೊಟ್ಟೆ, ಚಾಟಿ ಏಟು, ಕೊಬ್ಬಿದ ಭೂಮಾಲೀಕರಿಗೆ ಅರಮನೆ ಪಲ್ಲಕ್ಕಿ : ಧರಿದ್ರರ ಶವಗಳ ಮೇಲೆ ತುಂಡು ಬಟ್ಟೆಯೂ ಇಲ್ಲ. ಆದರೆ ಮಂದಿರದ ಸೋಮಾರಿ ಬೆಕ್ಕು ಸತ್ತಾಗ ಅದಕ್ಕೆ ಶವ ಲೇಪನ; ಅರ್ಚಕ ವರ್ಗದ ಕಾಮತೃಷೆಗೆ ದೇವಸೇವಿಕೆಯರ ಬಲಿ; ಮುಂದು ಮಕ್ಕಳ ತಾಯಂದಿರಾಗಬೇಕಾದ ಹೆಂಗಳೆಯರಿಗೆ ಮಂದಿರದ ಪವಿತ್ರ ಗೂಳಿ, ಪವಿತ್ರ ಟಗರುಗಳ ಜತೆ ಕಡ್ಡಾಯ ಸಂಭೋಗ" (ಪುಟ 380)

"ಪಾಪಿ (ದುಡಿಯುವ) ಜನರಿಗೆ ಯಾವ ಧಾರ್ಮಿಕ ಹಕ್ಕೂ ಇಲ್ಲ. ದಂಡಿಸುವ ಕಾಪೀರುಗಳು, ಭೂಮಾಲೀಕರು, ವರ್ತಕರು, ಸೈನ್ಯ, ಆಡಳಿತಗಾರರು - ಅರ್ಚಕರು ಹೀಗೆ ಸುಲಿಗೆಯ ಸೂತ್ರವನ್ನು ಬಿಗಿದು ಕಟ್ಟಿದೆ"..

ಇದು ಎಲ್ಲ ಕಾಲದ, ಎಲ್ಲ ದೇಶದ ಶೋಷಣೆಯ ಕಥೆ ಇದರ ಹಿಂದೆ ಮಿಡಿಯುವ ಮಾನವೀಯ ಹಾಡು ಎಲ್ಲ ದೇಶಗಳ ಎಲ್ಲ ಕಾಲಗಳಲ್ಲೂ ಒಂದೇ. ಆದರೆ ಕಾಲಘಟ್ಟಕ್ಕೆ ತಕ್ಕದೆ ಸ್ವರೂಪದಲ್ಲಿ ಬದಲಾವಣೆಗಳು, ಬೇರೆ ಬೇರೆ ದೇಶಕ್ಕೆ ತಕ್ಕಂಥ ಶೋಷಣೆಯ ರೂಪದಲ್ಲಿ ಬದಲಾವಣೆ ಇದ್ದೇ ಇದೆ. ಆದರೆ ಸುಲಿಗೆ ಇದರ ವಿರುದ್ಧ ಮಿಡಿಯುವ ಬಂಡಾಯದ ಧ್ವನಿ ಮಾತ್ರ ಒಂದೇ.

ಇಂತಹ ಆಡಳಿತದ ವಿರುದ್ಧ ಐಗುಪ್ತ ಜನ ನಡೆಸಿದ ಹೋರಾಟ ರೋಮಾಂಚಕಾರಿಯಾಗಿದೆ. ಆ ಜನರ ಜೀವನವನ್ನು ಸಮಗ್ರವಾಗಿ ಕಟ್ಟಿಕೊಡುವ, ಒಂದು ಜನಾಂಗದ ನೋವನ್ನು ದಟ್ಟವಾಗಿಸುವ ಕಥೆ ವೀರಗಾಥೆಯಾಗಿ ಕಣ್ಣು ಮುಂದೆ ಕಟ್ಟಿದೆ.

ಫೆರೋನ ಗೊಂಬೆಯಂತಹ ಪೊಳ್ಳು ಜೀವನ, ಅರ್ಚಕರ ಹಿಪಾಕ್ರಸಿ ಭೂಮಾಲೀಕರ ನಪುಂಸಕತನ ಬಯಲು ಮಾಡುವಲ್ಲಿ ಕಾದಂಬರಿ ಯಶಸ್ವಿಯಾಗಿದೆ. ಮೆನೆಪ್‌ಟಾ ಹೇಳುವ ಈ ಮಾತುಗಳನ್ನು ನೋಡಿ : ಮಹಾಪ್ರಭುಗಳೇ, ಮಹಾಅರ್ಚಕರೇ, ಅಮಾತ್ಯರೇ, ಪ್ರತಿಷ್ಠಿತರೇ ಜನರಿಗೆ ಸಿಟ್ಟು ಬಂದಾಗ ಅದು ಮಹಾಪೂರವಾಗ್ತದೆ. ಅದರಲ್ಲಿ ನೀವೆಲ್ಲ ಕೊಚ್ಚಿ ಹೋಗ್ತೀರಿ! ಮಹಾಪೂರ ಇಳಿದಾಗ ಕಂಡುಬರೋ ಜಗತ್ತು ಹೊಸದು-ಹೊಚ್ಚಹೊಸದು" (ಪುಟ 382)

"ಕತ್ತಲಾದ ಮೇಲೆ ಬೆಳಕು ಹರೀತದೆ ಇದು ಸಾಮಾನ್ಯ ಅಂತ ತೋರುವ ಅಸಾಮಾನ್ಯ ವಿಷಯ!"

ರಾಜೇಶ್ವರರಾವ್‌ರ ಗಡಿಬಿಡಿ

(4ನೇ ಪುಟದಿಂದ)

ಸಿ. ಪಿ. ಐ. ಮತ್ತು ಅದರ ನಾಯಕರು ನಮಗೆ ತಣ್ಣಗೆ ಹೇಳುತ್ತಾರೆ– ತುರ್ತುಪರಿಸ್ಥಿತಿ ಬೆಂಬಲ ಗಂಭೀರ ತಪ್ಪಾಯಿತು ಎಂದು. ಹಾಗಾದರೆ ಶ್ರೀಮತಿ ಗಾಂಧಿ, ಅವರು ತುರ್ತುಪರಿಸ್ಥಿತಿ ಆಳ್ವಿಕೆ ಮತ್ತು ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಫ್ಯಾಸಿಸಂ ವಿರೋಧಿ ಸಮರದ ಬಗ್ಗೆ ಪ್ರಶಂಸೆ ಮಾಡಲು 60 ದೇಶಗಳಿಂದ ಬಂದ 114 ವಿದೇಶಿ ಪ್ರತಿನಿಧಿಗಳ ವಿಚಾರ ಏನು ? ಅದೊಂದು "ಗಂಭೀರ ತಪ್ಪು" ಎಂಬುದನ್ನು ಜಗತ್ತಿಗೆ ಹೇಳಲು ರಾಜೇಶ್ವರರಾವ್ ಮತ್ತು ಅವರ ಪಕ್ಷವನ್ನು ನೇಮಕ ಮಾಡಿದ್ದಾರೆಯೆ ? ಅದರ ಬಗ್ಗೆ ನಮಗೆ ಏನೂ ಸುದ್ದಿ ತಿಳಿದುಬಂದಿಲ್ಲ. ಸಿ. ಪಿ. ಐ. ನಾಯಕತ್ವ ಅದರ ಬಗ್ಗೆ ಏನಾದರೂ ಇದ್ದರೆ ಹೇಳಲಿ.

ತೀವ್ರ ಅಪರಾಧ

ನಾಗರಿಕ ಹಕ್ಕುಗಳು, ಪ್ರಜಾಪ್ರಭುತ್ವವಾದಿ ಹಕ್ಕುಗಳು ಮತ್ತು ಸಂಸತ್ ಪ್ರಜಾಪ್ರಭುತ್ವವಾದಿ ವ್ಯವಸ್ಥೆಯ ಮೂಲಭೂತ ಹಕ್ಕುಗಳು ಇವೆಲ್ಲದರ ಮೇಲೆ, ಬಲಪ್ರತಿಗಾಮಿತನ ಮತ್ತು ಫ್ಯಾಸಿಸಂನ ಮೇಲಿನ ಪವಿತ್ರ ಸಮರದ ನೆಪದಲ್ಲಿ ಮಾರಕ ಪೆಟ್ಟು ಕೊಟ್ಟ ಶ್ರೀಮತಿ ಗಾಂಧಿಯವರ ತುರ್ತುಪರಿಸ್ಥಿತಿಗೆ ಬೆಂಬಲ ಕೊಡುವುದು ಯಾವುದೇ ಕಮ್ಯುನಿಸ್ಟ್ ಮಾಡುವ ತೀವ್ರ ಅಪರಾಧ ಎಂದು ನಾವು ಸಿ. ಪಿ. ಐ. (ಎಂ)ನವರು ಬಲವಾಗಿ ನಂಬಿದ್ದೇವೆ. ತುರ್ತುಪರಿಸ್ಥಿತಿಗೆ ಬೆಂಬಲ ಕೊಟ್ಟದ್ದು ಆಕಸ್ಮಿಕವಲ್ಲ, ಅಥವಾ ನಿರ್ಧಾರದ ತಪ್ಪಲ್ಲ ಎಂದು ನಾವು ತಿಳಿಯುತ್ತೇವೆ. ಸಂಪೂರ್ಣ ಬಲಅವಕಾಶವಾದಿ ವರ್ಗ ತೀರ್ಮಾನದ ಫಲವಾಗಿ ಅದು ಬಂದಿದೆ.

1969ರಿಂದ ಕಾಂಗ್ರೆಸ್ ಸರ್ಕಾರಕ್ಕೆ ಮತ್ತು ತುರ್ತುಪರಿಸ್ಥಿತಿಗೆ ಬೆಂಬಲ ಕೊಟ್ಟ ಸಿ. ಪಿ. ಐ. ಬಗ್ಗೆ ಸಿ. ಪಿ. ಐ. (ಎಂ) ತೀವ್ರ ವಿಮರ್ಶೆಮಾಡಿದೆ. ಆಂತರಿಕ ತುರ್ತುಪರಿಸ್ಥಿತಿಯನ್ನು ಬೆಂಬಲಿಸಲು 60 ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಭಾರತಕ್ಕೆ ಬಂದಿಳಿದಿದ್ದರ ಬಗ್ಗೆಯೂ ನಾವು ವಿಷಾದಿಸುತ್ತೇವೆ. ವಿದೇಶಿ ಕಮ್ಯುನಿಸ್ಟ್ ಪಕ್ಷಗಳ ಈ ತೀವ್ರ ಅಪರಾಧದ ಬಗ್ಗೆ ಹೇಳುವಾಗ ಸಿ. ಪಿ. ಐ. (ಎಂ) ತುಂಬ ಜಾಗರೂಕತೆಯಿಂದ ಇದೆ.

ಸೋದರ ಪಕ್ಷಗಳ ಆಂತರಿಕ ವ್ಯವಹಾರಗಳಲ್ಲಿ ಸಿ. ಪಿ. ಎಸ್. ಯು. ಮತ್ತು ಸಿ. ಪಿ. ಸಿ.ಗಳು ತಲೆಹಾಕುತ್ತಿವೆ ಎಂದು ಇ. ಎಂ. ಎಸ್. ಭಾಷಣದಲ್ಲಿ ಹೇಳಿದ್ದರ ಬಗ್ಗೆ ರಾಜೇಶ್ವರರಾವ್ ತುಂಬ ಕೋಪಗೊಂಡಿದ್ದಾರೆ. "ನಮ್ಮದೇ ಆದ ಅನುಭವದ ಆಧಾರದ ಮೇಲೆ ನಾನು, ಸಿ. ಪಿ. ಎಸ್. ಯು. ನಾಯಕತ್ವದ ಮೇಲಿನ ಈ ಆರೋಪವನ್ನು ಅಲ್ಲಗಳೆದ" ಎಂದಿದ್ದಾರೆ. ನಂತರ, "ಸಿ. ಪಿ. ಸಿ. ನಾಯಕತ್ವವು, ಬಿರುಕಿಗೆ ಮುಂಚೆ ನಮ್ಮ ಪಕ್ಷವನ್ನು ಸೆಳೆಯಲು ಹೇಗೆ ಪ್ರಯತ್ನಿಸುತ್ತಿತ್ತು ಮತ್ತು ಒಡಕಿನ ನಂತರ ನಕ್ಸಲ್‌ಬಾರಿ ದಾರಿಯನ್ನು ಹಿಡಿಯುದಿದ್ದಾಗ ಹೇಗೆ ಸಿ. ಪಿ. ಐ. (ಎಂ) ಪಕ್ಷವನ್ನು ಒಡೆಯಿತು" ಎಂಬುದನ್ನು ಸಾಕ್ಷ್ಯಾಧಾರಗಳ ಸಮೇತ ತೋರಿಸಿದ್ದಾರಂತೆ.

ನಮ್ಮ ಮತ್ತು ಅವರ ಅನುಭವಗಳು ಹೊಂದಿಕೊಳ್ಳುವುದಿಲ್ಲವಾದ್ದರಿಂದ ನಾವು ರಾಜೇಶ್ವರರಾಯರಿಗಿಂತ ಬೇರೆ ಅಭಿಪ್ರಾಯ ಹೊಂದುತ್ತೇವೆ. ಈ ಸದ್ಯದ ಪರಿಸ್ಥಿತಿಯಲ್ಲಿ ಈ ಬಗ್ಗೆ ಬಹಿರಂಗ ಚರ್ಚೆ ಅಗತ್ಯ ಅಥವಾ ಪ್ರಯೋಜನಕಾರಿ ಎಂದೂ ನಾವು ಯೋಚಿಸುವುದಿಲ್ಲ. ಸಿ. ಪಿ. ಐ.(ಎಂ) ಪಕ್ಷವು ವಿವಿಧ ಕಮ್ಯುನಿಸ್ಟ್ ಪಕ್ಷಗಳ ಬಗ್ಗೆ ಏನು ಹೇಳಿದೆ, ವಿವಿಧ ಕಮ್ಯುನಿಸ್ಟ್ ಪಕ್ಷಗಳು ಸಿ. ಪಿ. ಐ. (ಎಂ) ಬಗ್ಗೆ ಏನು ಹೇಳಿವೆ ಅದಕ್ಕೆ ಏನು ಮಾಡಿವೆ ಎಲ್ಲವೂ ದಾಖಲೆಯಲ್ಲಿವೆ. "ಬ್ಯಾಲೆನ್ಸ್ ಷೀಟ್"ಮಾಡುವ ಯತ್ನ ಅಥವಾ "ಮಧ್ಯಪ್ರವೇಶ"ದಿಂದ ಒಂದಲ್ಲ ಒಂದು ದೊಡ್ಡ ಕಮ್ಯುನಿಸ್ಟ್ ಪಕ್ಷವನ್ನು ವಿನಾಯ್ತಿಕೊಡುವ ಯತ್ನ ಯಾವುದೂ ಪ್ರಯೋಜನಕಾರಿಯಲ್ಲ.

"ಮಧ್ಯಪ್ರವೇಶ"ದ ಬಗ್ಗೆ ನಮ್ಮ ನಿಲುವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಹಾಯಮಾಡುವ ಸಲುವಾಗಿ ಈ ವಿಚಾರದ ಬಗ್ಗೆ ಸಿ. ಪಿ. ಐ. (ಎಂ)ನ ನಿಲುವಿನ ಬಗ್ಗೆ ಸಿ. ಪಿ. ಐ. ನ ಗಮನ ಸೆಳೆಯುತ್ತೇವೆ.

1968ರಲ್ಲಿ ಬರ್ದ್ವಾನಿನಲ್ಲಿ ಸಿ. ಪಿ. ಐ. (ಎಂ) ಅಂಗೀಕರಿಸಿದ ಸೈದ್ಧಾಂತಿಕ ಗೊತ್ತುವಳಿಯು ದೊಡ್ಡ ಪಕ್ಷಗಳ ಮಧ್ಯಪ್ರವೇಶವು ತೀರ ಅಸಾಮಾನ್ಯ ಪರಿಸ್ಥಿತಿಗಳಲ್ಲಿ ಮಾತ್ರ ಸರಿಯೆನಿಸಬಹುದು. ಒಂದು ಪಕ್ಷವು ತನ್ನ ರಾಜಕೀಯ ನೀತಿಯಲ್ಲಿ ಪೂರ್ತಿ ತಪ್ಪುಹಾದಿ ಹಿಡಿದಾಗ ಮತ್ತು ಸ್ನೇಹಪೂರ್ವಕ ಟೀಕೆಯನ್ನು ಅದು ನಿರಾಕರಿಸಿದಾಗ ಇನ್ನೇನೂ ದಾರಿಯಿಲ್ಲದಿದ್ದರೆ ಬಹಿರಂಗ ವಿಮರ್ಶೆ ಮಾಡಬೇಕು, ಎಂದು ಸೂಚಿಸುತ್ತದೆ.

○

ಸಿ.ಪಿ.ಐ.(ಎಂ) ತುಮಕೂರು ಜಿಲ್ಲಾ ಸಮಿತಿ ಸಭೆ

"ಗುಂಡೂರಾವ್ ರಾಜೀನಾಮೆ ನೀಡಲಿ"

1981 ಜುಲೈ 11 ಮತ್ತು 12 ರಂದು ತುಮಕೂರು ಜಿಲ್ಲಾ ಸಿ.ಪಿ.ಐ.(ಎಂ) ಸಮಿತಿ ಸಭೆ ರಾಜ್ಯಸಮಿತಿ ಸದಸ್ಯರಾದ ಕಾಮ್ರೇಡ್ ಕೆ. ಆರ್. ನಾಯಕ್‌ರವರ ಅಧ್ಯಕ್ಷತೆಯಲ್ಲೂ ರಾಜ್ಯಸಮಿತಿಯ ಕಾರ್ಯದರ್ಶಿಗಳಾದ ಕಾಂ. ಎಂ. ಕೆ. ಭಟ್‌ರವರ ಸಮ್ಮುಖದಲ್ಲೂ ನಡೆದು ಈ ಕೆಳಗಿನ ತೀರ್ಮಾನವನ್ನು ಮಾಡಲಾಯಿತು.

1) ಗುಂಡೂರಾವ್ ಆಡಳಿತದಲ್ಲಿ ಎಫ್.ಎಂ. ಖಾನ್ ಮತ್ತು ಇಬ್ರಾಹಿಂ ಪ್ರಕರಣ ನಡೆದು ಕರ್ನಾಟಕದ ಜನತೆಯಲ್ಲೂ ನಿಸ್ಪೃಹ ಅಧಿಕಾರಿಗಳಲ್ಲೂ ಭಯದ ವಾತಾವರಣ ಉಂಟಾಗಿರುವುದನ್ನು ಈ ಸಭೆ ತೀವ್ರವಾಗಿ ಪರಿಗಣಿಸುತ್ತಾ, ಇಬ್ರಾಹಿಂರನ್ನು ತಕ್ಷಣ ಮಂತ್ರಿಮಂಡಲದಿಂದ ಕಿತ್ತುಹಾಕಬೇಕೆಂದೂ ಖಾನ್‌ರವರ ಮೇಲೆ ತೀವ್ರ ಕ್ರಮಕೈಗೊಳ್ಳಬೇಕೆಂದೂ ನಿಸ್ಪೃಹ ಅಧಿಕಾರಿಗಳಿಗೆ ರಕ್ಷಣೆ ಕೊಡಬೇಕೆಂದೂ ಈ ಸಭೆ ಒತ್ತಾಯಿಸುತ್ತಾ ಗುಂಡೂರಾಯರ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಜನವಿರೋಧಿ ಕ್ರಮಗಳನ್ನು ನಡೆಸುತ್ತಾ, ನಿರಪರಾಧಿಗಳ ಮೇಲೆ ದೌರ್ಜನ್ಯ ನಡೆಸುತ್ತಾ ಹಿಂದುಳಿದ ವರ್ಗಗಳಿಗೆ ಸಿಕ್ಕುತ್ತಿದ್ದ ಸೌಲಭ್ಯ ರದ್ದುಗೊಳಿಸುತ್ತಾ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದೆ. ಭ್ರಷ್ಟಾಚಾರ ಗಗನಕ್ಕೇರಿದೆ. ಜನತೆಗೆ ರಕ್ಷಣೆಯು ಇಲ್ಲವಾಗಿದೆ. ಕಾನೂನು ವ್ಯವಸ್ಥೆ ಕುಸಿದಿದೆ. ಇದಕ್ಕೆಲ್ಲಾ ಗುಂಡೂರಾಯರ ಸರ್ಕಾರವೇ ಹೊಣೆಯಾದ್ದರಿಂದ ಗುಂಡೂರಾವ್ ಸರಕಾರ ತಕ್ಷಣ ರಾಜೀನಾಮೆ ಕೊಡಬೇಕೆಂದು ಈ ಸಭೆ ಒತ್ತಾಯಿಸುತ್ತದೆ.

(7ನೇ ಪುಟ ನೋಡಿ)

ತೀರ್ಪು ಜನತೆಯದ್ದೇ

ಪಶ್ಚಿಮ ಬಂಗಾಳದಲ್ಲಿನ ಎಡರಂಗಸರಕಾರ ಅಧಿಕಾರದಲ್ಲಿ ನಾಲ್ಕು ವರ್ಷಗಳನ್ನು ಪೂರ್ಣಗೊಳಿಸುತ್ತಿದೆ.

ಈ ನಾಲ್ಕು ವರ್ಷಗಳು ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬಲಪಡಿಸುವ ಅವಿರತ ಹಾಗೂ ನಿರಂತರ ಹೋರಾಟದ ಒಂದು ಅಧ್ಯಾಯವಾಗಿವೆ.

ಇತ್ತೀಚಿಗೆ ಇದೇ ಮಣ್ಣಿನಲ್ಲಿ ಪ್ರಜಾಪ್ರಭುತ್ವವನ್ನು ಜಜ್ಜಿಬಿಡುವ ಹಾಗೂ ಅದನ್ನು ಸಮಾಧಿಮಾಡುವ ರಾಕ್ಷಸೀ ಯತ್ನವೊಂದು ನಡೆಯಿತು. ಅದು ಜನತೆಯ ದನಿಯನ್ನು ಅಡಗಿಸಲು, ಅವರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹತ್ತಿಕ್ಕಲು ಹಾಗೂ ಅವರ ಜೀವ ಮತ್ತು ಜೀವನದೊಂದಿಗೆ ತಾಂಡವವಾಡಬಯಸಿತ್ತು. ಆದರೆ, ರಾಜ್ಯದ ಜನತೆ ಅದಕ್ಕೆ ಶರಣಾಗಲು, ತಲೆಬಗ್ಗಿಸಲು ನಿರಾಕರಿಸಿದರು. ಅದರ ಫಲಿತಾಂಶವೇ ಎಡರಂಗಸರಕಾರ. ಆದ್ದರಿಂದಲೇ ಎಡರಂಗಸರಕಾರ ಜನರ ಎಲ್ಲಾ ಪ್ರಜಾಪ್ರಭುತ್ವ ಹಕ್ಕುಗಳನ್ನು, ಸಭೆ ಸೇರುವ, ಸಂಘಟನೆಯ ಹಕ್ಕನ್ನು, ಮೆರವಣಿಗೆ ನಡೆಸುವ, ಮುಷ್ಕರಕ್ಕೆ ಕರೆ ನೀಡುವ ಹಕ್ಕನ್ನು, ಸ್ವತಂತ್ರವಾಗಿ ಮತಚಲಾಯಿಸುವುದನ್ನು, ಎಲ್ಲಕ್ಕಿಂತ ಮಿಗಿಲಾಗಿ ಸಮಗ್ರ ಸಂಸದೀಯ ಪ್ರಜಾಪ್ರಭುತ್ವವನ್ನು ರಕ್ಷಿಸುವ ಪ್ರತಿಜ್ಞೆ ಕೈಗೊಂಡಿದೆ. ದೇಶದ ಉದ್ದಗಲಕ್ಕೂ ಸರ್ವಾಧಿಕಾರೀ ಕಪ್ಪುಮೋಡಗಳು ಬಲವಾಗಿ ಮುಸುಕಿರುವ ಸಮಯದಲ್ಲಿ, ಇಂತಹ ಶಕ್ತಿಗಳಿಗೆ ಪ್ರತಿಭಟನೆಯಾಗಿ ಪ್ರಜಾಪ್ರಭುತ್ವದ ಬಾವುಟವನ್ನು ನಮ್ಮ ಜನ ಎತ್ತಿಹಿಡಿಯಬೇಕೆಂದು ನಾವು ನಿರ್ಣಯಿಸಿದ್ದೇವೆ.

ಸ್ವಾತಂತ್ರ್ಯದ 33 ವರ್ಷಗಳ ನಂತರವೂ ಒಂದುದೇಶವಾಗಿ ನಮ್ಮ ಸಮಗ್ರತೆಗೆ ಪ್ರತ್ಯೇಕತಾವಾದ ಹಾಗೂ ಕೋಮುವಾದದ ಹಿಂಸಾತ್ಮಕ ಸಂಚುಗಳು ಬೆದರಿಕೆ ಒಡ್ಡಿರುವಾಗ, ಹಲವರು ಅನೈಕ್ಯತೆ ಹಾಗೂ ಪರಸ್ಪರ ಸಂಶಯದ ಸುಳಿಯಲ್ಲಿ ಸಿಲುಕಿ ನಜ್ಜುಗುಜ್ಜಾಗಿರುವಾಗ, ನಾವು ನಮ್ಮ ಮುನ್ನಡೆಯಲ್ಲಿ ಪಶ್ಚಿಮ ಬಂಗಾಲದ ವಿವಿಧ ಧಾರ್ಮಿಕಪಂಗಡಗಳು ಹಾಗೂ ಜಾತಿಗಳ ನಡುವಿನ ಐಕ್ಯತೆಯನ್ನು ನಮ್ಮಕಣ್ಣುಬೊಂಬೆಯಂತೆಯೇ ಕಾಪಾಡಿಕೊಂಡಿದ್ದೇವೆ. ಪಶ್ಚಿಮ ಬಂಗಾಲದ ಶ್ರಮಿಕ ಜನತೆಗೆ ಸಲ್ಲಬೇಕಾದ ಕೀರ್ತಿ, ಇದನ್ನು ಸಾಧಿಸಿದ್ದು ಹೋರಾಟದ ಕಣದಲ್ಲಿ. ಈ ಕಣದಲ್ಲಿ ಬೆವರು, ರಕ್ತ ಸುರಿದು ಗೆಳೆಯರು ಯಾರು, ವೈರಿಗಳು ಯಾರು ಎಂಬುದನ್ನು ಗುರುತಿಸಲಾಯಿತು. ಈ ಐಕ್ಯತೆ ಹಾಗೂ ಭ್ರಾತೃತ್ವವನ್ನು ಮತ್ತಷ್ಟು ಕ್ರೋಢೀಕರಿಸುವುದು ಮತ್ತು ಎಲ್ಲಾ ವಿಚ್ಛಿದ್ರಕಾರೀ ಶಕ್ತಿಗಳನ್ನು ಕೊನೆಗಾಣಿಸಲು ನಮ್ಮ ಪ್ರಯತ್ನ.

ನಾಲ್ಕು ವರ್ಷಗಳಲ್ಲಿ ನಾವು ಬಹುದೂರ ಸಾಗಿ ಬಂದಿದ್ದೇವೆ. ಹಳ್ಳಿಗಳಲ್ಲಿನ ಜನರು, ಕೃಷಿಕಾರ್ಮಿಕರು, ಬರ್ಗಾದಾರರು, ರೈತರು-ಎಲ್ಲರೂ ತಮ್ಮದು ಎಂಬ ಹೊಸ ಭಾವನೆಯಿಂದ ಜೀವನೋತ್ಸಾಹ ತುಂಬಿಕೊಂಡಿದ್ದಾರೆ. ಮರಣಾಸನ್ನ ಗ್ರಾಮೀಣ ಆರ್ಥಿಕತೆಗೆ ಹೊಸಜೀವ ತುಂಬಿಸಲಾಗಿದೆ. ಕಾರ್ಖಾನೆಗಳಲ್ಲಿ ಮತ್ತು ಕಚೇರಿಗಳಲ್ಲಿ ದುಡಿಯುವ ಕಾರ್ಮಿಕರು, ಶಿಕ್ಷಕರು ಹಾಗೂ ಮಧ್ಯಮವರಮಾನದ ಜನರು ಉತ್ತಮ ಭವಿಷ್ಯದ ತಮ್ಮ ಯತ್ನಗಳಲ್ಲಿ ಹೊಸ ಐಕ್ಯತೆ ಕಂಡುಕೊಂಡಿದ್ದಾರೆ ಮತ್ತು ತಮ್ಮ ನ್ಯಾಯವಾದ ಬೇಡಿಕೆಗಳಿಗೆ ಮಾನ್ಯತೆ ಪಡೆದಿದ್ದಾರೆ. ಶಿಕ್ಷಣ ಹಾಗೂ ಸಂಸ್ಕೃತಿಯ ಕ್ಷೇತ್ರದಲ್ಲಿ ಹೊಸ ಮೌಲ್ಯಗಳು ಮೂಡಿಬಂದಿವೆ. ಜನತೆಯ ಒಳಿತು ನಿರ್ದೇಶಕ ನೀತಿಯಾಗಿದೆ. ಜನಸಾಮಾನ್ಯರಿಗೆ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಜೀವನದ ಬಾಗಿಲು ತೆರೆಯಬೇಕೆಂದು ನಾವು ಬಯಸುತ್ತೇವೆ. ಪ್ರಜಾಪ್ರಭುತ್ವವನ್ನು ಪಂಚಾಯತು ಹಾಗೂ ಪುರಸಭೆಗಳ ಮಟ್ಟದವರೆಗೂ ವಿಸ್ತರಿಸಲಾಗಿದೆ. ಹಿಂದುಳಿದವರು, ಅಂಗವಿಕಲರು ಹಾಗೂ ದಟ್ಟದರಿದ್ರರ ಹಿತಾಸಕ್ತಿಗಳನ್ನು ಕಾಪಾಡಲು ಹಾಗೂ ಉತ್ಕೃಷ್ಟಗೊಳಿಸಲು ನಮ್ಮ ಶಕ್ತ್ಯಾನುಸಾರ ಪ್ರಯತ್ನಿಸಿದ್ದೇವೆ. ಕೆಲಸದ ಹಕ್ಕನ್ನು ಸಾರ್ವತ್ರಿಕಗೊಳಿಸಲಾಗಿದೆ ಹಾಗೂ ಭ್ರಷ್ಟಾಚಾರದ ಅಳವಿಗೆ ಸಿಗದಂತೆ ಮಾಡಲಾಗಿದೆ. ಸದಾಕಾಲವೂ ಹೆಚ್ಚೆಚ್ಚು ಉದ್ಯೋಗಾವಕಾಶ ಸೃಷ್ಟಿಸಲು ನಾವು ಹೆಣಗುತ್ತಿದ್ದೇವೆ.

ನಾವು ಇನ್ನೂ ಬಹುದೂರ ಸಾಗಬೇಕಾಗಿದೆ. ನಾವು ಕಳಕಳಿಯಿಂದ ಅಪೇಕ್ಷಿಸುವುದು ಜನತೆಯ ಸಂಘಟಿತ ಹಾಗೂ ಸಕ್ರಿಯ ಸಹಕಾರವನ್ನು.

ನಮಗೆ ವಿರುದ್ಧವಾಗಿರುವ ಶಕ್ತಿಗಳೂ ಸಕ್ರಿಯವಾಗಿವೆ. ಅವರು ಜನತೆಯ ತೀರ್ಪು ಪಡೆಯಲು ಹಿಂದೇಟು ಹಾಕುತ್ತಿದ್ದಾರೆ. ಅವರು ಪ್ರಜಾಪ್ರಭುತ್ವ ವಿರೋಧೀ ಭಯೋತ್ಪಾದಕ ಮಾರ್ಗವನ್ನನುಸರಿಸಬಯಸುತ್ತಾರೆ. ಅಂತಿಮ ತೀರ್ಪು ಜನತೆಯದ್ದೇ ಎಂದು ಬೇರೆ ಹೇಳಬೇಕಾಗಿಲ್ಲ.

ಪಶ್ಚಿಮ ಬಂಗಾಲ ಸರಕಾರ

ಪಾಕಿಸ್ತಾನದ ಪ್ರಗತಿಪರ ಲೇಖಕರು

(3ನೇ ಪುಟದಿಂದ)

ಬರೆಯುತ್ತಾರೆ. ಪಾಕಿಸ್ತಾನದ ಪಂಜಾಬ್‌ಗೆ ಸೇರಿದ ಫರಾಜ್ ಅಹಮದ್‌ರ ಒಂದು ಕವನ ಈ ಗುಂಪಿಗೆ ಸೇರಿದ ಕವಿಗಳ ರಸಿಕತೆಗೆ ಸಾಕ್ಷಿ :

ಅಬ್ ಕೆ ಬಿಛ್‌ಡೇ ತೋ
ಶಾಯದ್ ಕಭೀ ಖ್ವಾಬೋಂ ಮೆಂ
ಮಿಲೇ,
ಜಿಸ್ ತರ್‌ಹಾ ಸೂಖೇ ಹುವೇ ಫೂಲ್
ಕಿತಾಬೋಂ ಮೆಂ ಮಿಲೇ.

(ಈ ಸಾರಿ ನಾವು ಅಗಲಿದರೆ ಬಹುಶಃ ಕನಸಿನಲ್ಲಿ ಭೇಟಿಯಾಗಬಹುದು, ಹೇಗೆಂದರೆ ಕಮರಿಹೋದ ಹೂಗಳು ಮರೆತುಹೋದ ಪುಸ್ತಕದ ಮಧ್ಯೆ ಭೇಟಿಯಾಗುವಂತೆ)

ಆಸಕ್ತಿ ಕೆರಳಿಸುವ ಮತ್ತೊಂದು ವಿಷಯವೆಂದರೆ, ಕವಯಿತ್ರಿಯರೂ ಪಾಕಿಸ್ತಾನದಲ್ಲಿ ಜನಪ್ರಿಯವಾಗುತ್ತಿರುವುದು. ಅದರಲ್ಲೂ ಗಂಭೀರ ವಿಷಯಗಳನ್ನು ಎತ್ತಿಕೊಂಡು ಈ ಮಹಿಳಾ ಲೇಖಕಿಯರು ಬರೆಯುತ್ತಿರುವುದು. ಸಂಪ್ರದಾಯವಾದಿ ದೇಶದಲ್ಲಿ ಕಟ್ಟುನಿಟ್ಟಾಗಿ ಜೀವಿಸಬೇಕಾದ ಗೃಹಿಣಿ, ತಾಯಿ, ತಾಯಿಯಾಗುವವರ ಅನಿಸಿಕೆಗಳನ್ನು ಫಾಮಿದಾ ರಿಯಾಜ್, ಕಿಷ್‌ವರ್ ನಾಹಿದ್, ಪರ್ವೀನ್ ಶಾಕೀರ್ ಮತ್ತು ಜೊಹ್‌ರಾ ನಿಗಾರ್ ಮುಂತಾದವರ ಕವನಗಳು ಪ್ರತಿಧ್ವನಿಸುತ್ತವೆ.

"ಆವಾಜ್" ಪತ್ರಿಕೆಯು ಜಫರ್‌ನನ್ನು ಮುದುವೆಯಾಗಲು ಮೊದಲನೆಯ ಗಂಡ ಹಾಗೂ ಅವನ ವೈಭವವನ್ನು ಲಂಡನ್‌ನಲ್ಲಿ ತ್ಯಜಿಸಿಬಂದ ಫಾಮಿದಾ ರಿಯಾಜ್ ಪಾಕಿಸ್ತಾನದಲ್ಲಿ ಪತ್ರಿಕೆಗಳ ನಿರ್ಬಂಧದ ಮಾತು ಇರಲಿ, ಅಲ್ಲಿ ಕುರಾನ್ ಸಹಾ ಸೆನ್ಸಾರ್‌ಗೆ ಒಳಪಟ್ಟಿದೆಯೆಂದು ಆಧಾರ ಸಹಿತ ಹೇಳುತ್ತಾರೆ.

ಪಾಕಿಸ್ತಾನದ ಲೇಖಕರು ಎಡಪಂಥೀಯರೇ ? ಎಂಬ ಪ್ರಶ್ನೆಗೆ ನೇರ ಉತ್ತರ ಸಿಕ್ಕುವುದಿಲ್ಲ. ಬಹಳಷ್ಟು ಲೇಖಕರು ಹೇಳುವುದಿಷ್ಟೇ : ಮಾನವ ಜನಾಂಗದ ಸುಖ, ಸಂತೋಷಗಳನ್ನು ಬಯಸುವವರನ್ನೆಲ್ಲಾ ನಮ್ಮ ಸರ್ಕಾರ ಎಡಪಂಥೀಯರು ಎನ್ನುತ್ತದೆ. ಆ ದೃಷ್ಟಿಯಿಂದ ನಾವೂ ಎಡಪಂಥೀಯರೇ. ನಾಳೆ ನಮ್ಮ ಮಕ್ಕಳಿಗೆ ಎರಡು ಹೊತ್ತಿನ ಊಟ ಸಿಗುತ್ತದೋ ಇಲ್ಲವೋ, ಅವರಿಗೆ ಸರಿಯಾದ ಶಿಕ್ಷಣ, ವಾಸಮಾಡಲು ಮನೆ ದೊರಕುವುದೋ ಇಲ್ಲವೋ ಅನ್ನುವುದನ್ನು ದೇಶದ ರಾಜಕೀಯ ನಿರ್ಧರಿಸುವುದರಿಂದ ರಾಜಕೀಯ ನಮಗೆ ಬೇಕೇಬೇಕು ಎನ್ನುತ್ತಾರೆ ಫಾಮಿದಾ ರಿಯಾಜ್.

ಇಂತಹ ಲೇಖಕರು ಭಾರತದಲ್ಲೂ ಬೆಳೆಯಬೇಕು. ದಬ್ಬಾಳಿಕೆಯ ಅಡಿಯಲ್ಲಿ ಪಾಕಿಸ್ತಾನದಲ್ಲಿ ಉದಯಿಸುತ್ತಿರುವ ಈ ಹೊಸ ಅಲೆ ಭಾರತದ ಲೇಖಕರಿಗೂ ಸ್ಫೂರ್ತಿ ಕೊಟ್ಟೀತು.

○

ದ.ಕ. ಜಿಲ್ಲಾ ಸಮಿತಿ ಸಭೆ

ರಾಜ್ಯದಲ್ಲಿ ಕಾನೂನು ಕಾಯ್ದೆಗಳನ್ನು ಕಾಪಾಡುವುದರಲ್ಲಿ ಮತ್ತು ನಿರಪರಾಧಿಗಳ ಜೀವ ರಕ್ಷಿಸುವಲ್ಲಿ ವಿಫಲರಾಗಿರುವ ಮುಖ್ಯಮಂತ್ರಿ ಗುಂಡೂರಾಯರು ತಕ್ಷಣ ರಾಜೀನಾಮೆ ನೀಡಲಿ ಎಂದು ದಿನಾಂಕ 15ರಂದು ಮಂಗಳೂರಿನಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ. ಕ. ಜಿಲ್ಲಾ ಸಮಿತಿಯ ಸಭೆಯಲ್ಲಿ ಒತ್ತಾಯಿಸಲಾಯಿತು.

"ರಾಜ್ಯದಲ್ಲಿ ದುರಂತಗಳ ಮೇಲೆ ದುರಂತಗಳು ಸಂಭವಿಸುತ್ತಿರುವಾಗ ಕಾಂಗ್ರೆ ಮುಂದಾಳುಗಳು ತಮ್ಮ ಸರಕಾರದ ಭ್ರಷ್ಟ ಮಂತ್ರಿಗಳ ರಕ್ಷಣೆಗಾಗಿ ಯತ್ನಿಸುತ್ತಿದ್ದಾರೆ".

"ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಸುಮಾರು 337ಕ್ಕೂ ಮಿಕ್ಕಿ ಜನರು ಸಾವಿಗೀಡಾಗಿದ್ದ ಕಳ್ಳಭಟ್ಟಿ ದುರಂತಕ್ಕೆ ಆಡಳಿತ ವ್ಯವಸ್ಥೆ ಮತ್ತು ಭ್ರಷ್ಟ ಅಧಿಕಾರಿಗಳು ಹೊಣೆಗಾರರಿದ್ದಂತೆಯೇ, ಗೃಹಖಾತೆ ಮತ್ತು ಅಬಕಾರಿ ಖಾತೆಯನ್ನು ಮುಖ್ಯಮಂತ್ರಿಯವರೇ ವಹಿಸಿದ್ದು ಈ ಕಳ್ಳಭಟ್ಟಿ ದುರಂತಕ್ಕೆ ಸ್ವತಃ ಅವರೂ ಹೊಣೆ ಆಗಿದ್ದಾರೆ. ಕಳ್ಳಭಟ್ಟಿ ದೊರೆಗಳು ಹಾಗೂ ಈ ದುರ್ವ್ಯವಹಾರದಲ್ಲಿ ತೊಡಗಿರುವವರಿಗೆ ಅಧಿಕಾರಿಗಳಿಂದಲೇ ರಕ್ಷಣೆ ಸಿಗುತ್ತದೆ."

ಕಳ್ಳಭಟ್ಟಿ ದುರಂತದಲ್ಲಿ ಜೀವತ್ತೆತ್ತವರ ಕುಟುಂಬಗಳಿಗೆ ತಕ್ಷಣವೇ ಯೋಗ್ಯ ಪರಿಹಾರ, ತಬ್ಬಲಿಗಳಾದ ಮಕ್ಕಳಿಗೆ ಹಾಗೂ ಇತರರ ಜೀವನಕ್ಕೆ ಪುನರ್ವ್ಯವಸ್ಥೆ ಮಾಡಬೇಕೆಂದು ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಕ್ರಿಮಿನಲ್ ಮೊಕದ್ದಮೆಗೆ ಒಳಗಾಗಿರುವ ಮಂತ್ರಿ ಇಬ್ರಾಹಿಂರವರನ್ನು ರಾಜೀನಾಮೆ ಕೊಡಿಸದೇ ಮುಂದುವರೆಸಿ ರಕ್ಷಣೆ ಕೊಡುವ ಹಾಗೂ ರಾಜ್ಯದ ಪ್ರಜೆಗಳ ಹಾಗೂ ವಿರೋಧ ಪಕ್ಷಗಳ ಒತ್ತಾಯಕ್ಕೆ ಬೆಲೆ ಕೊಡದೆ ಸರ್ವಾಧಿಕಾರಿಯಂತೆ ವರ್ತಿಸುತ್ತಿರುವ ಗುಂಡೂರಾಯರು ಅಧಿಕಾರ ಬಿಟ್ಟು ಕೆಳಗಿಳಿಯಬೇಕೆಂದು ಜಿಲ್ಲಾ ಸಮಿತಿಯ ಪರವಾಗಿ ದ.ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ಕೆ. ಆರ್. ಶ್ರಿಯಾನ್ ಹೇಳಿಕೆ ಹೊರಡಿಸಿದ್ದಾರೆ.

ಕಾರ್ಡುದಾರರಿಗೆ ಸಕ್ಕರೆ ಕೋಟಾ ಭರ್ತಿ ಸಿಗಲಿ

ಜಿಲ್ಲಾ ಸಮಿತಿ ಕೈಗೊಂಡ ಇನ್ನೊಂದು ನಿರ್ಣಯದಲ್ಲಿ - ಹಿಂದೆ 5 ಕೆ.ಜಿ.ಯಂತೆ ಕಾರ್ಡುದಾರರಿಗೆ ರೇಶನ್ ಅಂಗಡಿಗಳಲ್ಲಿ ಸಕ್ಕರೆ ಸಿಗುತ್ತಿದ್ದು, ಇದೀಗ ಅದನ್ನು ಕಡಿಮೆ ಮಾಡಿದುದರಿಂದ ಜನರು ಹೆಚ್ಚು ಕ್ರಯಕೊಟ್ಟು ಸಕ್ಕರೆ ಮಾರ್ಕೆಟುಗಳಿಂದ ಪಡೆಯಬೇಕಾದ ಪರಿಸ್ಥಿತಿ ಬಂದಾದುದರಿಂದ ಜನರು ಸಂಕಷ್ಟಕ್ಕೀಡಾಗಿದ್ದಾರೆ. ಅಲ್ಲದೆ ರೇಶನ್ ಅಂಗಡಿಗಳಲ್ಲಿ ಗೋಧಿ, ಅಕ್ಕಿ, ಮೈದಾ ಇತ್ಯಾದಿ ಸಿಗುತ್ತಿಲ್ಲ. ಬಂದರೂ ಅಲ್ಪ-ಸ್ವಲ್ಪ. ಇದರಿಂದಾಗಿ ನಗರದ ಹಾಗೂ ಗ್ರಾಮಾಂತರ ಪ್ರದೇಶಗಳ ಜನರಿಗೆ ತುಂಬಾ ತೊಂದರೆಯಾಗಿದೆ. ಆದುದರಿಂದ ಕಾರ್ಡುದಾರರಿಗೆ ಕನಿಷ್ಠ 5 ಕೆ.ಜಿ.ಯಂತೆ ಸಕ್ಕರೆ ಹಾಗೂ ಅಕ್ಕಿ, ಗೋಧಿ, ಮೈದಾ ಇತ್ಯಾದಿ ಕ್ರಮವತ್ತಾಗಿ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದೂ ಜಿಲ್ಲಾಧಿಕಾರಿಗಳನ್ನೂ, ಸರಕಾರವನ್ನೂ ಈ ಸಭೆಯು ಒತ್ತಾಯಿಸಿದೆ.

○

ಗುಂಡೂರಾವ್ ರಾಜೀನಾಮೆ ನೀಡಲಿ

(5ನೇ ಪುಟದಿಂದ)

2) ಮುಖ್ಯಮಂತ್ರಿಗಳ ನೇತೃತ್ವದಲ್ಲಿರುವ ಪೋಲೀಸ್ ಮತ್ತು ಅಬ್ಕಾರಿ ಇಲಾಖೆಯ ಅಧಿಕಾರಿಗಳ ಅಧ್ಯಕ್ಷತೆ ಲಂಚಗುಳಿತನ ರಾಜಕೀಯ ಕೈವಾಡ ಕಳ್ಳಭಟ್ಟಿಯವರೊಡನೆ ಶಾಮೀಲು ಇವುಗಳಿಂದಾಗಿ ಕಳ್ಳಭಟ್ಟಿ ಸರಾಯಿ ಕುಡಿದು ಸಾವಿರಕ್ಕೂ ಹೆಚ್ಚು ಜನ ಸತ್ತಿರುವುದನ್ನೂ ಈ ಸಭೆ ತೀವ್ರ ದುಃಖದಿಂದ ಗಮನಿಸುತ್ತದೆ. ಈ ಬಗ್ಗೆ ಗುಂಡೂರಾಯರು ಶಾಸನಸಭೆಯಲ್ಲಿ ಕೊಟ್ಟಿರುವ ಹೇಳಿಕೆ ವಿಚಿತ್ರವಾದದಿಂದ ಕೂಡಿದ್ದಾಗಿದೆ. ಶಾಸಕರನ್ನೂ ಪ್ರಜಾಪ್ರಭುತ್ವವನ್ನೂ ಧಿಕ್ಕರಿಸುವ ರೀತಿಯಿಂದಿರುವುದಾಗಿದೆ. ಇದನ್ನೂ ಈ ಸಭೆ ತೀವ್ರವಾಗಿ ಪರಿಗಣಿಸಿ ಚಿಂತಿಸುತ್ತಾ ಗುಂಡೂರಾಯರ ಸರಕಾರ ರಾಜೀನಾಮೆ ಕೊಡಬೇಕೆಂದು ಒತ್ತಾಯಿಸುತ್ತದೆ. ಪೋಲೀಸ್ ಮತ್ತು ಅಬ್ಕಾರಿ ಇಲಾಖೆಗಳು ಮುಖ್ಯಮಂತ್ರಿ ಕೈಯಲ್ಲಿರುವುದರಿಂದ ಇದರ ಹೊಣೆ ಗುಂಡೂರಾಯರ ಮೇಲೆ ಇರುವುದರಿಂದ ಇದು ಅಕ್ರಮವೂ ಸಹವಾದುದರಿಂದ ಗುಂಡೂರಾಯರ ಮಂತ್ರಿಮಂಡಲ ರಾಜೀನಾಮೆ ನೀಡಬೇಕೆಂದು ಈ ಸಭೆಯು ಒತ್ತಾಯಿಸುತ್ತದೆ.

●

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಘಟಕ ಅಸ್ತಿತ್ವಕ್ಕೆ

ಎಲ್ಲ ಬಗೆಯ ಸಾಮಾಜಿಕ ಅನ್ಯಾಯಗಳ ವಿರುದ್ಧ, ಸಮಾನ ವೇತನ ಹಾಗೂ ಉದ್ಯೋಗಾವಕಾಶ, ಶಿಕ್ಷಣ ಸವಲತ್ತು ಮುಂತಾದವುಗಳಿಗಾಗಿ ಹೋರಾಡುವ ಉದ್ದೇಶದಿಂದ ಬೆಂಗಳೂರಿನಲ್ಲಿ ಜೂನ್ 1, 2 ಮತ್ತು 3ರಂದು ಸಮ್ಮೇಳನ ಜರುಗಿ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ರೂಪುಗೊಂಡಿತ್ತು.

ರಾಜ್ಯದ ಹಲವಾರು ಕಡೆ ಬೇರೆಬೇರೆ ಹೆಸರುಗಳ ವೇದಿಕೆಯಡಿ ಮಹಿಳಾ ಸಂಘಟನೆ ನಡೆಯುತ್ತಿತ್ತು. ಈ ಎಲ್ಲ ಸಂಘಟನೆಗಳನ್ನು ಒಂದೇ ವೇದಿಕೆಯ ಮೇಲೆ ತರಬೇಕೆಂದು ಸಮ್ಮೇಳನದಲ್ಲಿ ತೀರ್ಮಾನವಾಗಿತ್ತು.

ಈ ಪ್ರಕಾರ ರಾಯಚೂರಿನ ಪ್ರಗತಿಪರ ಮಹಿಳಾ ಸಂಘವು ತನ್ನ ಸರ್ವ ಸದಸ್ಯರ ಸಭೆ ನಡೆಸಿ ಸಂಘದ ಹೆಸರನ್ನು 'ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ರಾಯಚೂರು' ಎಂದು ಬದಲಿಸಿದೆ. ಸಾರ್ವಜನಿಕರು ಸಹಕರಿಸಬೇಕೆಂದು ಸಂಘಟಕರು ವಿನಂತಿಸಿದ್ದಾರೆ.

○

ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆ

ದ.ಕ. ಜಿಲ್ಲೆಯ ಬಂಟ್ವಾಳ ತಾಲ್ಲೂಕು ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆಯು ಬಂಟ್ವಾಳದಲ್ಲಿ ಯಶವಂತಹಾಲ್‌ನಲ್ಲಿ 12-7-81ರಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಬಿ. ಎಚ್. ಬಂಗೇರ ವಹಿಸಿದ್ದರು.

ಪ್ರಾರಂಭದಲ್ಲಿ ಸ್ವಾಗತಿಸಿದ ಸಂಘದ ಕಾರ್ಯದರ್ಶಿ ಕಾಂ. ಬಿ. ಸಂಜೀವ ಬಂಗೇರ ಕಳೆದ ವರ್ಷದ ಚಟುವಟಿಕೆಗಳ ವರದಿ ಹಾಗೂ ಲೆಕ್ಕಪತ್ರಗಳನ್ನು ಮಂಡಿಸಿದರು. ಸೂಕ್ತ ತಿದ್ದುಪಡಿಗಳೊಂದಿಗೆ ವರದಿ ಅಂಗೀಕಾರವಾಯಿತು.

ಸಾವಿರ ಬೀಡಿ ಕಟ್ಟಿದ್ದಕ್ಕೆ 12ರೂ. ಮಜೂರಿ ಕೊಡಬೇಕೆಂದೂ, 20ಶೇ. ಬೋನಸ್ಸು, ಬೀಡಿ ತಯಾರಿಕೆಗೆ ಕೊಡುವ ಎಲೆಯ ಅವರೇಜನ್ನು ಕಡಿಮೆ ಮಾಡಬೇಕೆಂದೂ, ಪ್ರಾವಿಡೆಂಟ್ ಫಂಡ್ ಮತಿಗೆ ವಸೂಲು ಮಾಡಿದ್ದಕ್ಕೆ ರಶೀದಿ ಕೊಡಬೇಕೇದೂ ಬೀಡಿ ಮಾಲೀಕರನ್ನು ಸಭೆ ಒತ್ತಾಯಿಸಿತು.

ಭ್ರಷ್ಟ ಮಂತ್ರಿ ಇಬ್ರಾಹಿಂರನ್ನು ಕೂಡಲೇ ವಜಾ ಮಾಡಬೇಕೆಂದೂ, ಒತ್ತಾಯಿಸಲಾಯಿತು. ಪೆಟ್ರೋಲ್, ಡಿಜೇಲ್, ಸೀಮೆ ಎಣ್ಣೆಯ ಬೆಲೆಯನ್ನು ಹೆಚ್ಚಿಸಿದ ಕೇಂದ್ರದ ಧೋರಣೆಯನ್ನು ಸಭೆ ಖಂಡಿಸಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಿ. ಐ. ಟಿ. ಯು. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ಕೆ. ಮೂಸಬ್ಬ, ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಯು. ಜನಾರ್ಧನ ನಾಯಕ್, ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಬಿ. ನಾರಾಯಣ, ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಸಮಿತಿಯ ಕಾರ್ಯದರ್ಶಿ ಕಾಂ. ಬಿ. ವಾಸುಗಟ್ಟಿ ಮೊದಲಾದವರು ಮಾತನಾಡಿದರು.

ಪ್ರಸಕ್ತ ಅವಧಿಗೆ 27 ಜನರಿರುವ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಹಾಗೂ ಅಧ್ಯಕ್ಷರನ್ನಾಗಿ ಕಾಂ. ಬಿ. ಎಚ್. ಬಂಗೇರ, ಕಾಂ. ಬಿ. ನಾರಾಯಣ, ಕಾಂ. ಕೃಷ್ಣಪ್ಪರನ್ನು ಉಪಾಧ್ಯಕ್ಷರನ್ನಾಗಿ, ಪ್ರಧಾನಕಾರ್ಯದರ್ಶಿಗಳನ್ನಾಗಿ ಕಾಂ. ಬಿ.ಸಂಜೀವಬಂಗೇರ, ಸಹಾಯಕ ಕಾರ್ಯದರ್ಶಿಗಳನ್ನಾಗಿ ಕಾಂ.ಬಿ. ವಾಸುಗಟ್ಟಿ, ಕಾಂ. ಶೀನಬಂಗೇರರನ್ನು, ಕಾಂ. ಬಿ. ಮಂಜುನಾಥ ಸಾಫಲ್ಯರನ್ನು ಕೋಶಾಧಿಕಾರಿಯನ್ನಾಗಿ ಚುನಾಯಿಸಲಾಯಿತು.

○

ಹಳವಳ್ಳಿ ಡಿ.ವೈ.ಎಫ್.ಐ. ವಾರ್ಷಿಕ ಮಹಾಸಭೆ

ಕುಂದಾಪುರ ತಾಲ್ಲೂಕಿನ ಹಳವಳ್ಳಿ ಗ್ರಾಮದ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಡಿ. ವೈ. ಎಫ್. ಐ.)ಯ 1980-81ನೇ ವರ್ಷದ ಸಾಲಿನ ವಾರ್ಷಿಕ ಮಹಾಸಭೆಯು 16-7-81ರಂದು ಕಾಂ. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಿ. ವೈ. ಎಫ್. ಐ. ಕುಂದಾಪುರ ತಾಲ್ಲೂಕು ಅಧ್ಯಕ್ಷರಾದ ಕಾಂ. ಶಂಕರ್ ಖಾರ್ವಿಯವರು ಧ್ವಜಾರೋಹಣಮಾಡಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಒಂದು ವರ್ಷದ ಚಟುವಟಿಕಾ ವರದಿಯನ್ನು ಹಳವಳ್ಳಿ ಘಟಕದ ಕಾರ್ಯದರ್ಶಿ ಕಾಂ. ಎಚ್. ಬಿ. ಶ್ರೀನಿವಾಸ್ ಮಂಡಿಸಿದರು.

ಸಭೆಯನ್ನುದ್ದೇಶಿಸಿ ಡಿ. ವೈ.ಎಫ್. ಐ. ತಾಲ್ಲೂಕು ಕಾರ್ಯದರ್ಶಿ ಕಾಂ. ಮಹಾಬಲ ವಡೇರ ಹೋಬಳಿ, ಶಿವಾನಂದ ಕೋಡಿ ಮತ್ತು ಜಯಕುಮಾರ್ ಮಾತನಾಡಿ ಸಂಘಟನೆ ಬಲಪಡಿಸುವಂತೆ ಕೇಳಿಕೊಂಡರು.

ಸಭೆಯು 1981-82ನೇ ವರ್ಷಕ್ಕೆ ನೂತನ ಕಾರ್ಯಕಾರಿ ಸಮಿತಿಯನ್ನು ಆಯ್ಕೆಮಾಡಿತು. ಶ್ರೀಯುತರಾದ ಕೆ. ನಾಗರಾಜ್ ಅಧ್ಯಕ್ಷ, ಕೆ. ಲಿಂಗಣ್ಣ ಉಪಾಧ್ಯಕ್ಷ, ಎಚ್. ಬಿ. ಶ್ರೀನಿವಾಸ್ ಕಾರ್ಯದರ್ಶಿ, ಎಚ್. ಎಸ್. ಕೋಟಿ ಜೊತೆಕಾರ್ಯದರ್ಶಿ ಮತ್ತು ಎಚ್. ಚಂದ್ರ, ಎ. ಪಾಂಡು, ಎಚ್. ಬಿ. ಕೃಷ್ಣ, ಕೆ. ಬಾಬು, ಕೆ. ಶೀನ, ಎಚ್. ನರಸಿಂಹ ಹಾಗೂ ಕೆ. ನರಸಿಂಹ ಸಮಿತಿ ಸದಸ್ಯರುಗಳು.

○

ಚವ್ಹಾಣರ ತವರು ಮನೆ

(1ನೇ ಪುಟದಿಂದ)

ರಾಜಸ್ಥಾನ ಗಡಿ ಒಂದೆಡೆ ಮಧ್ಯ ಪ್ರದೇಶಕ್ಕೆ. ಇನ್ನೊಂದೆಡೆ ಪಂಜಾಬಕ್ಕೆ ಹೊಂದಿಕೊಂಡಿದೆ. ಇವೆರಡೂ ರಾಜ್ಯಗಳಲ್ಲೂ ವಿಪರೀತ ಸಮಸ್ಯೆಗಳು. ಚಂಡೀಗಡದಿಂದ 4ನೇ ಜುಲೈನ ಇಂಡಿಯನ್ ಎಕ್ಸ್‌ಪ್ರೆಸ್‌ನ ವರದಿಗಾರ ಪಂಜಾಬ್ ಕಾಂಗ್ರೆಸ್ (ಕಾಂಗ್ರೈ) ಧುರೀಣರೊಂದಿಗೆ ಕಲ್ಪನಾನಾಥ ರಾಯ್‌ರ ಒಳಸಂಚು ಎಂಬ ಶಿರೋನಾಮೆಯಲ್ಲಿ ಈ ರೀತಿ ಬರೆದಿರುವನು: ಶ್ರೀ ಕಲ್ಪನಾನಾಥರಾಯ್ ಮತ್ತು ಬಹುಮತೀಯರ ನಡುವೆ ವಿವಾದವೆದ್ದಿದೆ. ಭಿನ್ನಮತೀಯ ಸಂಸತ್‌ಸದಸ್ಯ ಶ್ರೀ ಅಮರೀಂದರ ಸಿಂಹರು ಪತಿಯಾಲಾದಲ್ಲಿ ತನ್ನ ಹಿಂಬಾಲಕರ ಸಭೆಯೊಂದನ್ನು ಏರ್ಪಡಿಸಿದ್ದರು. ಕಲ್ಪನಾನಾಥ್ ರಾಯ್ ಉದ್ಘಾಟಿಸುವವರಿದ್ದರು. ಬಹುಮತೀಯರು ರಾಯ್‌ರ ಈ ಉದ್ದೇಶವನ್ನು ಪ್ರಶ್ನಿಸಿದ್ದಲ್ಲದೇ ಕೇಂದ್ರಕ್ಕೂ ದೂರು ಸಲ್ಲಿಸಿದ್ದಾರೆ. ಅಂತೂ ಆ ಕಾರ್ಯಕ್ರಮವೇನೊ ರದ್ದಾಯಿತು.

ಮಧ್ಯ ಪ್ರದೇಶ ಮುಖ್ಯಮಂತ್ರಿ ಶ್ರೀ ಅರ್ಜುನ ಸಿಂಗ್‌ರು ಪ್ರಧಾನಮಂತ್ರಿ ಮತ್ತು ಭಾವೀ ಉತ್ತರಾಧಿಕಾರಿ ರಾಜೀವ್‌ರ ಆಶೀರ್ವಾದ ಪಡೆಯಲು ತನ್ನ ಸಂಪುಟ ಸಹಿತ ದೆಹಲಿಗೆ ತೀರ್ಥಯಾತ್ರೆ ಕೈಗೊಳ್ಳಲು ನಿರ್ಧರಿಸಿದ್ದಂತೂ ಎಲ್ಲ ಪತ್ರಿಕೆಗಳ ಪ್ರಮುಖ ಸುದ್ದಿಯಾಗಿತ್ತು. ಜುಲೈ 3ರಂದು ಭೋಪಾಲ್‌ನಿಂದ ಸ್ಟೇಟ್ಸ್‌ಮನ್ ವರದಿಗಾರ ಈ ರೀತಿ ಬರೆದಿರುವರು: ಮ. ಪ್ರ. ದ ಸಂಪುಟದ 38 ಸದಸ್ಯರೂ ಸರಕಾರದ ಖರ್ಚಿನಲ್ಲೇ ಇಂದಿರಾರ ಆಶೀರ್ವಾದ ಪಡೆಯಲು ಹೊರಡುವವರಿದ್ದರು. ನಂತರ ಅರ್ಜುನಸಿಂಗರು ಈ ಯಾತ್ರೆ ಅವರವರ ಖರ್ಚಿನಿಂದ ಎಂದು ಹೇಳಿದರು.

ನಂತರದ ವರದಿಗಳಿಂದ ಈ ಯಾತ್ರೆ ರದ್ದಾಗಿರುವುದು ತಿಳಿಯಿತು. ಬಹುಶಃ ಪತ್ರಿಕೆಗಳು ಈ ಕುರಿತು ಎಬ್ಬಿಸಿದ ಗದ್ದಲದಿಂದಾಗಿ ಯಾತ್ರೆ ರದ್ದಾಯಿತು. ಆದರೆ ಪ್ರಧಾನಮಂತ್ರಿ ಮತ್ತವರ ಪುತ್ರನ ಆಶೀರ್ವಾದದಿಂದ ತಾವು ಸುಭದ್ರವಾಗಿ ಉಳಿಯಲು ಸಾಧ್ಯವೆಂದು ಅರ್ಜುನಸಿಂಗರ ಮಂತ್ರಿಮಂಡಳ ಭಾವಿಸಿದ್ದಂತೂ ಸತ್ಯ.

ಕಾಂಗ್ರೈ ಅಧಿಕಾರದಲ್ಲಿರುವ ಇನ್ನೊಂದು ರಾಜ್ಯ ಬಿಹಾರ. ಇಲ್ಲಿಯ ಮುಖ್ಯಮಂತ್ರಿ ಜಗನ್ನಾಥ ಮಿಶ್ರಾ ಮತ್ತು ಭಿನ್ನಮತೀಯ ಧುರೀಣ ಮಹಾಬೀರ್ ಪಾಸ್ವಾನರ ಜಗಳವೂ ಜನನಿತವಾಗಿದೆ. ಗುಜರಾತ್, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ ಮುಂತಾದ ರಾಜ್ಯಗಳಲ್ಲೂ ಇದೇ ಪಾಡು.

ಕರ್ನಾಟಕದ್ದಂತೂ ಹೇಳುವುದೇ ಬೇಡ. ಮಹಾರಾಷ್ಟ್ರದಲ್ಲಿ ನಡೆದ ನಂಬಿಗಸ್ಥರ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಗುಂಡೂರಾವ್‌ರೂ ಭಿನ್ನಮತೀಯರ ಚಟುವಟಿಕೆಗಳಿಂದ ವಿಚಲಿತರಾಗಿದ್ದಾರೆ. ಯೋಜನಾ ಮಂತ್ರಿ ಇಬ್ರಾಹಿಂರು ಆಪಾದನೆಗೊಳಗಾಗಿದ್ದರೂ ಅವರನ್ನು ಸಮರ್ಥಿಸಿಕೊಳ್ಳುತ್ತಿರುವ ರಾವ್‌ರ ನಡವಳಿಕೆ ಅವರ ಪಕ್ಷದಲ್ಲೇ ಹೇಸಿಗೆ ಹುಟ್ಟಿಸಿದೆ. ಇವೆಲ್ಲ ಕಾಂಗ್ರೈ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ನಡೆಯುತ್ತಿರುವ ಒಳಜಗಳದ ಕೆಲವು ನಿದರ್ಶನಗಳು.

ಈ ವಿಷಯದಲ್ಲಿ ಸ್ವಾರಸ್ಯವಾದುದೆಂದರೆ ಕೆಲವು ಕೇಂದ್ರ ಮಂತ್ರಿಗಳು ತಮ್ಮತಮ್ಮ ರಾಜ್ಯಗಳಲ್ಲಿ ವಹಿಸುತ್ತಿರುವ ಪಾತ್ರ. ಪಂಜಾಬ್‌ನ ಮುಖ್ಯಮಂತ್ರಿ ದರ್ಬಾರಸಿಂಗ್‌ರ ವಿರುದ್ಧ ಜೈಲ್‌ಸಿಂಗ್; ಗುಜರಾತ್ ಮುಖ್ಯಮಂತ್ರಿ ಸೋಳಂಕಿ ವಿರುದ್ಧ ಯೋಗೇಂದ್ರ ಮಕ್ವಾನಾ; ಬಿಹಾರ್‌ನ ಜಗನ್ನಾಥ್ ಮಿಶ್ರಾ ವಿರುದ್ಧ ಕೇದಾರ ಪಾಂಡೆ... ಈ ರೀತಿ.

ಕಾಂಗ್ರೈ ವಿರೋಧಿ ಸ್ಥಾನದಲ್ಲಿರುವ ಕೇರಳದಲ್ಲೂ ಇದೇ ಸ್ಥಿತಿ. ಕಾಂಗ್ರೈನ 17 ಶಾಸಕರಲ್ಲಿ 9 ಜನ ನಾಯಕತ್ವ ಬದಲಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಈ ಒಳಜಗಳ ಮುಚ್ಚಲೆಂದೇ ಇತ್ತೀಚಿಗೆ ಮತ್ತೆ "ವಿಮೋಚನಾ ಸಮರದ ಘೋಷಣೆ ಹೊರಬಂದದ್ದು. ಭಿನ್ನಮತೀಯರನ್ನು ಸಮಾಧಾನಪಡಿಸಲು ನಾಯಕತ್ವಕ್ಕೆ ಸಾಧ್ಯವಿಲ್ಲದಾಗಿದೆ.

ಇದು ಚವ್ಹಾಣ, ಕೆ.ಸಿ. ಪಂತ್ ಮೊದಲಾದ ಮಹನೀಯರು ಆತುರದಿಂದ ಪ್ರವೇಶಿಸಲು ಬಯಸುತ್ತಿರುವ ಮನೆಯ ಹೂರಣ. ○

"ಪೊಲಿಟ್‌ಬ್ಯೂರೋ ಎಚ್ಚರಿಕೆ"

(1ನೇ ಪುಟದಿಂದ)

ಮಾಡಿರುವುದಾಗಿ ಇಂದಿರಾಗಾಂಧಿಯವರು ಪತ್ರಿಕಾಗೋಷ್ಠಿಯಲ್ಲಿ ಹೇಳಿರುವುದು ಅಪ್ಪಟ ಸುಳ್ಳೆಂಬುದನ್ನು ಇದು ಎತ್ತಿ ತೋರಿಸುತ್ತಿದೆ.

ಬೆಲೆಗಳನ್ನು ಏರಿಸಿ, ಜನತೆ ಉಪಯೋಗಿಸುವುದನ್ನು ಕಡಿಮೆ ಮಾಡುವ ಒಂದೇ ಕ್ರಮವು ಸರಕಾರವು ಹಣದುಬ್ಬರವನ್ನು ತಡೆಗಟ್ಟಲು ತೆಗೆದುಕೊಳ್ಳುವ ಕ್ರಮವೆಂಬುದು ಸ್ಪಷ್ಟ. ಇದರರ್ಥ ಹಣದುಬ್ಬರವನ್ನು ಜನತೆಯೇ ಹೊರಬೇಕೆಂಬುದು! ಸರಕಾರವು ಹೊರದೇಶಗಳಿಂದ ಗೋಧಿಯನ್ನು ಆಮದು ಮಾಡಲು ನಿರ್ಣಯಿಸಿರುವುದು ಆರ್ಥಿಕ ಪರಿಸ್ಥಿತಿಯು ಎಷ್ಟು ಹದಗೆಟ್ಟಿದೆ ಎಂಬುದನ್ನು ತೋರಿಸುತ್ತದೆ. ಸಮೃದ್ಧ ಬೆಳೆ ಇರುವ ಸಂದರ್ಭದಲ್ಲಿ ಸರಕಾರವು ಆಮದು ಮಾಡಿಕೊಳ್ಳುತ್ತಿದೆ! ಸರಕಾರದ ಧಾನ್ಯ ಖರೀದಿಸುವ ಧೋರಣೆ ಸಂಪೂರ್ಣ ವಿಫಲವಾಗಿದೆ ಹಾಗೂ ಭೂಮಾಲಿಕ ಮತ್ತು ವ್ಯಾಪಾರಸ್ಥರು ಶೇಖರಿಸಿರುವ ದಾಸ್ತಾನುಗಳನ್ನು ಹೊರಗೆಳೆಯುವುದಕ್ಕೆ ಧೈರ್ಯವಿಲ್ಲ ಎಂಬುದು ಸ್ಪಷ್ಟ. ಆಹಾರಧಾನ್ಯಗಳ ಬೆಲೆಗಳು ತೀವ್ರವಾಗಿ ಏರಲಿದ್ದು, ಜನತೆಯು ಕಡಿಮೆ ತಿನ್ನುವಂತಾಗುವುದರ ಮೂಲಕ ಬೇಡಿಕೆಯನ್ನು ಹತೋಟಿಯಲ್ಲಿಡುವ ತಮ್ಮ ಕ್ರಮದ ಬಗ್ಗೆ ಅರ್ಥಸಚಿವ ವೆಂಕಟರಾಮನ್ ತೃಪ್ತಿಪಟ್ಟುಕೊಳ್ಳಬಹುದು.

ಅದೇ ಸಂದರ್ಭದಲ್ಲಿ ಅಂತರ್‌ರಾಷ್ಟ್ರೀಯ ಹಣಕಾಸು ನಿಧಿ (IMF) ಯಿಂದ ಮತ್ತು ಇನ್ನಿತರ ವಿದೇಶೀ ಮೂಲಗಳಿಂದ ದೊಡ್ಡ ಪ್ರಮಾಣದ ಸಾಲವನ್ನು ಪಡೆಯಲು ಸರಕಾರವು ಪ್ರಯತ್ನಿಸುತ್ತಿದೆ. ಇದರಿಂದಾಗಿ ವಿದೇಶೀ ಸಾಲಗಳ ಪಾವತಿಯ ಹೊರೆ ಹೆಚ್ಚಾಗುವುದು ಮತ್ತು ಭಾರತವು ಹೆಚ್ಚು ಹೆಚ್ಚು ರಫ್ತು ಮಾಡಲು ಒತ್ತಡವು ಹೆಚ್ಚುವುದು. ಇವೆಲ್ಲವುಗಳಿಂದ ಜನತೆಯ ಜೀವನಮಟ್ಟದ ಮೇಲೆ ಆಕ್ರಮಣ ಹೆಚ್ಚುವುದು ಖಂಡಿತ. ಈ ಪರಿಸ್ಥಿತಿಯಲ್ಲಿ ತುರ್ತುಪರಿಸ್ಥಿತಿ ದಿನಗಳ ಕುಖ್ಯಾತ "ಕಡ್ಡಾಯ ಠೇವಣಿ" ಕ್ರಮವನ್ನು ಮತ್ತೆ ಹೇರಿ, ಕಾರ್ಮಿಕರ ಬೋನಸ್ಸು ಮತ್ತು ಡಿಯರ್‌ನೆಸ್ ಅಲೋವೆನ್ಸ್‌ಗಳನ್ನು ಕಸಿದುಕೊಂಡಲ್ಲಿ ಆಶ್ಚರ್ಯಪಡಬೇಕಿಲ್ಲ.

ಸಾರ್ವಜನಿಕ ಒತ್ತಾಯ ಮತ್ತು ಪ್ರತಿಭಟನೆಗಳ ಮೂಲಕ ಈ ಧೋರಣೆಗಳನ್ನು ಎದುರಿಸಿ, ಸೋಲಿಸದಿದ್ದಲ್ಲಿ ಆರ್ಥಿಕ ಪರಿಸ್ಥಿತಿಯು ಇನ್ನೂ ಕೆಟ್ಟುಹೋಗಿ ಜನತೆಯ ಸಂಕಷ್ಟಗಳು ಹೆಚ್ಚಾಗುವುದು ಹಾಗೂ ಜನತೆ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಳೆದುಕೊಳ್ಳುವುದು ಖಂಡಿತ, ಎಂದು ಪೊಲಿಟ್‌ಬ್ಯೂರೋ ಎಚ್ಚರಿಸಿದೆ. ○

ಟ್ರಾನ್ಸ್‌ಪೋರ್ಟ್ ಕೆಲಸಗಾರರ ಅಭೂತಪೂರ್ವ ಮುಷ್ಕರ

13-7-81 ರಂದು ದ. ಕ. ಜಿಲ್ಲೆಯ ಮೋಟಾರ್ ಟ್ರಾನ್ಸ್‌ಪೋರ್ಟ್ ಯೂನಿಯನ್ನಿನ ಕರೆಯ ಮೇರೆಗೆ ಜಿಲ್ಲಾದ್ಯಂತ ಮುಷ್ಕರ ನಡೆಸಲಾಯಿತು. ಜಿಲ್ಲೆಯ ವಿವಿಧ ಭಾಗಗಳಿಂದ ದೊರೆತಿರುವ ವರದಿಗಳಿಂದ ಮುಷ್ಕರ ಸಂಪೂರ್ಣ ಯಶಸ್ವಿಯಾಗಿರುವುದಾಗಿ ತಿಳಿದುಬಂದಿದೆ.

ಮೋಟಾರ್ ಟ್ರಾನ್ಸ್‌ಪೋರ್ಟ್ ಮತ್ತು ಇಂಜನೀಯರಿಂಗ್ ವರ್ಕರ್ಸ್ ಯೂನಿಯನ್ನಿನ ಪ್ರಧಾನಕಾರ್ಯದರ್ಶಿ ಕಾಂ. ಕೆ. ಮೂಸಬ್ಬ ಹೇಳಿಕೆಯೊಂದನ್ನು ಹೊರಡಿಸಿ ಮುಷ್ಕರ ಯಶಸ್ವಿಯಾಗಿ ನಡೆಸಿರುವುದಕ್ಕಾಗಿ ಕೆಲಸಗಾರರನ್ನು ಅಭಿನಂದಿಸಿರುವುದಲ್ಲದೇ, ಸಹಕರಿಸಿದ ಜಿಲ್ಲೆಯ ನಾಗರೀಕರಿಗೂ ಕೃತಜ್ಞತೆ ಸಲ್ಲಿಸಿದ್ದಾರೆ.

○

ಕೋಟೇಶ್ವರ ಗ್ರಾಮದ ಡಿ.ವೈ.ಎಫ್.ಐ. ವಾರ್ಷಿಕ ಮಹಾಸಭೆ

ಕುಂದಾಪುರ ತಾಲೂಕಿನ ಕೋಟೇಶ್ವರ ಗ್ರಾಮದ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಡಿ.ವೈ.ಎಫ್. ಐ.)ಯ 1980-81ನೇ ಸಾಲಿನ ವಾರ್ಷಿಕ ಮಹಾಸಭೆಯು ಉಪಾಧ್ಯಕ್ಷರಾದ ಕಾಂ. ಗೋಪಾಲ ಶೆಟ್ಟಿಗಾರ್‌ರವರ ಅಧ್ಯಕ್ಷತೆಯಲ್ಲಿ 14-7-81ರಂದು ನಡೆಯಿತು. ಕಾರ್ಯದರ್ಶಿ ಕಾಂ. ಗಣಪು ಭಂಡಾರಿಯವರು ವರ್ಷದ ಚಟುವಟಿಕಾ ಕರಡು ವರದಿ ಮಂಡಿಸಿದರು. ವರದಿಯ ಮೇಲೆ ಚರ್ಚೆಯಾಗಿ ವರದಿಯನ್ನು ಅಂಗೀಕರಿಸಲಾಯಿತು.

ಇರಾನಿನಲ್ಲಿ ವಾಮವಾದಿಗಳ ಅಮಾನುಷ ಹತ್ಯೆಮಾಡಲಾಗುತ್ತಿರುವುದನ್ನು ತೀವ್ರವಾಗಿ ಖಂಡಿಸಿದ ಸಭೆಯು ಹುತಾತ್ಮರಿಗೆ ಒಂದು ನಿಮಿಷ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಿತು.

ಸಭೆಯನ್ನುದ್ದೇಶಿಸಿ ತಾಲ್ಲೂಕು ಡಿ. ವೈ. ಎಫ್. ಐ. ಅಧ್ಯಕ್ಷ ಕಾಂ. ಶಂಕರ್‌ಖಾರ್ವಿ, ಕಾರ್ಯದರ್ಶಿ ಕಾಂ. ಮಹಾಬಲ್ ವಡೇರ ಹೋಬಳಿ, ಮುಲೆನಾಡು ವಲಯ ಸಂಚಾಲಕ ಕಾಂ. ಆನಂದಭಂಡಾರಿ, ಸಮುದಾಯ ಕಾರ್ಯದರ್ಶಿ ಕಾಂ.ಶಿವಾನಂದಕೋಡಿ ಮತ್ತು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಅಧ್ಯಕ್ಷೆ ಕುಮಾರಿ ಗುಲಾಬಿಯವರುಗಳು ಮಾತನಾಡಿದರು.

ಸಭೆಯಲ್ಲಿ 1981-82ನೇ ವರ್ಷದ ಸಾಲಿಗೆ ಈ ಕೆಳಗಿನ ಸಮಿತಿಯನ್ನು ಆಯ್ಕೆಮಾಡಲಾಯಿತು. ಕಾಂ. ಗೋಪಾಲಶೆಟ್ಟಿಗಾರ್ ಅಧ್ಯಕ್ಷ, ಕಾಂ. ಗೋಪಾಲ ದೇವಡಿಗ ಉಪಾಧ್ಯಕ್ಷ, ಕಾಂ. ಗಣಪುಭಂಡಾರಿ ಕಾರ್ಯದರ್ಶಿ, ಕಾಂ. ಗಣಪದೇವಡಿಗ ಮತ್ತು ಕಾಂ. ಸೀತರಾಮದೇವಡಿಗ ಜೊತೆಕಾರ್ಯದರ್ಶಿಗಳಾಗಿ ಆಯ್ಕೆಯಾದರು. ಸಮಿತಿಯಲ್ಲಿ ಶ್ರೀಯುತರಾದ ವಾಸುದೇವ ದೇವಡಿಗ, ಕೆ. ಶೀನ, ದೇವಭಂಡಾರಿ, ಭಾಸ್ಕರ ದೇವಡಿಗ, ಗೋಪಾಲ ದೇವಡಿಗ ಮತ್ತು ಕುಮಾರಿ ಗುಲಾಬಿ ಇರುವರು. ○

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ಬೆಂಗಳೂರಿನಲ್ಲಿ ನಾಲ್ಕು ದಿನಗಳ ಕಾರ್ಯಕ್ರಮ:

"ಪಶ್ಚಿಮ ಬಂಗಾಳ ಎಡರಂಗ ಸರಕಾರದ ನಾಲ್ಕು ವರ್ಷಗಳು"

ಪಶ್ಚಿಮ ಬಂಗಾಳ ಎಡರಂಗ ಸರಕಾರದ ನಾಲ್ಕು ವರ್ಷಗಳ ಸಾಧನೆಗಳನ್ನು ಕರ್ನಾಟಕದ ಜನತೆಗೆ ತಿಳಿಯಪಡಿಸುವುದಕ್ಕಾಗಿ ಪಶ್ಚಿಮ ಬಂಗಾಳ ಸರಕಾರದ ವಾರ್ತಾ ಮತ್ತು ಸಾಂಸ್ಕೃತಿಕ ಇಲಾಖೆಯು ಬೆಂಗಳೂರಿನಲ್ಲಿ ನಾಲ್ಕುದಿನಗಳ ಕಾರ್ಯಕ್ರಮವನ್ನು ನಡೆಸಲಿದೆ. 1981 ಆಗಸ್ಟ್ 3 ರಿಂದ 6ರ ತನಕ ಬೆಂಗಳೂರು ನಗರದ ಪುಟ್ಟಣ್ಣಚೆಟ್ಟಿ ಪುರಭವನ (ಟೌನ್ ಹಾಲ್)ದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಆಗಸ್ಟ್ 3ರಂದು ಸಂಜೆ 5-30ಕ್ಕೆ ವಸ್ತುಪ್ರದರ್ಶನದ ಉದ್ಘಾಟನೆ. ಈ ಕಾರ್ಯಕ್ರಮದಲ್ಲಿ ಪಶ್ಚಿಮ ಬಂಗಾಳದ ಸಚಿವರುಗಳು ಮತ್ತು ಕರ್ನಾಟಕ ರಾಜ್ಯದ ಬೇರೆಬೇರೆ ರಾಜಕೀಯ ಪಕ್ಷಗಳ ಮುಂದಾಳುಗಳು ಭಾಗವಹಿಸಲಿರುವರು. 4ರಂದು ಸಂಜೆ 5-30ಕ್ಕೆ "ಭಾರತ ದೇಶಕ್ಕೆ ಒಂದು ರಾಜಕೀಯ ಪರ್ಯಾಯ" ಎಂಬ ವಿಷಯದ ಮೇಲೆ ವಿಚಾರಸಂಕಿರಣ ನಡೆಯಲಿದ್ದು, ಇದರಲ್ಲಿ ಬೇರೆ ಬೇರೆ ರಾಜಕೀಯ ವಿಚಾರಧಾರೆಗಳುಳ್ಳ ಮುಂದಾಳುಗಳು, ಬುದ್ಧಿಜೀವಿಗಳು ಮತ್ತು ಖ್ಯಾತ ಸಂಪಾದಕ ಖಾದ್ರಿಶಾಮಣ್ಣ ಮೊದಲಾದವರು ಭಾಗವಹಿಸಲಿರುವರು. 5ರಂದು ಸಂಜೆ 6-30ಕ್ಕೆ "ಶ್ಯಾಮ" ಎಂಬ ನೃತ್ಯ-ನಾಟಕ ಪ್ರದರ್ಶನವಿದೆ. 6ರಂದು ಸಂಜೆ 6-30ಕ್ಕೆ ಪ. ಬಂಗಾಳ ಸರಕಾರದ ಜಾನಪದ ನಾಟ್ಯ ವಿಭಾಗದವರಿಂದ "ಭಾರತ ದೇಶದ ನೃತ್ಯಗಳ"ನ್ನು ಪ್ರದರ್ಶಿಸಲಾಗುವುದು.

ವಸ್ತುಪ್ರದರ್ಶನವು 3ರಂದು ಸಂಜೆ ಉದ್ಘಾಟಿಸಲ್ಪಟ್ಟು, 4, 5 ಮತ್ತು 6ರಂದು ಪ್ರತಿದಿನ ಮಧ್ಯಾಹ್ನದ ಮೇಲೆ 2 ಘಂಟೆಯಿಂದ ರಾತ್ರಿ 8 ಘಂಟೆಯ ತನಕ ಸಾರ್ವಜನಿಕರ ವೀಕ್ಷಣೆಗಾಗಿ ತೆರೆದಿಡಲಾಗುವುದು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT